ಹೊಸ ಮನುಷ್ಯ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಫೆಬ್ರವರಿ-೨೦೦೮ ಸಂಚಿಕೆ-೭



ಗಣರಾಜ್ಯಕ್ಕೆ ಗ್ರಾಮರಾಜ್ಯದ ಮೆರಗು ಬೇಕು

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜಸ್ಟ್
ಫೆಬ್ರವರಿ–೨೦೦೮
ಸಂಪುಟ–೮
ಸಂಚಿಕೆ–೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ
✆ ೦೮೨೩೬ ೨೯೮೭೫೪
೦೮೩೨೬ ೩೧೬೩೪೪
e-mail - janapada@yahoo.com

ಮುಖಪುಟ ಕೃಪೆ:ದಿ ಹಿಂದೂ

ನಿತ್ಯದ ಎಣಿಕೆ

ಶತಮಾನಗಳೇ – ಕಳೆದು ಹೋದವು
ಹೀಗೆ ನಿರೀಕ್ಷೆಯಲ್ಲಿ
ಅಂಕೆ ಸಂಖ್ಯೆಯಲ್ಲೇ – ಕದ ತಟ್ಟುತ್ತ ನಿಂತೆವು
ಹಾಗೆ ಭರವಸೆಗಳಲಿ.

ಆ ಹೊತ್ತು -- ಈ ಹೊತ್ತು
ಗೊತ್ತಿಲ್ಲ ನಡುಬೀದಿಯಲಿ ನಿಂತ
ನೆತ್ತಿಗೆ ಬಂದ ಉರಿ ಬಿಸಿಲು
ಆ ಗೆಲವು – ಈ ಸೋಲು
ತಿಳಿದಿಲ್ಲ ಗಡುವು ನೆರಳುಗಳಲಿ ನಿಂತ
ಇಳಿಹೊತ್ತಿಗೆ ತೆರೆದಿಟ್ಟ ಈ ಪರಿಯ ಬದುಕು.

ಏರು ಏರುತ್ತ ನಡೆದೆ
ಕನಸ – ಕಣ್ಣಲಿ ತುಂಬಿ – ಆ ದಿನಗಳ ನಂಬಿ
ಇಳಿ – ಇಳಿಯುತ್ತಾ ಜಾರಿದೆ
ನೆನಪು ಮನದಲಿ ತುಂಬಿ – ಆ ದಿನಗಳು ಕಂದಿ
ಕಾದಳು ಶಬರಿ – ಹೆಜ್ಜೆಯ ಸಪ್ಪಳಕ್ಕೆ
ಕಣ್ಣುಗಳಿಗೆ ಪೊರೆ ಕಟ್ಟಿದಾಗ–ರಾಮನ ಎಂಜಲಿಗೆ
ಕೊರಗಿದಳು ಅಹಲ್ಯೆ – ಸಂಜೆಯ ಧೂಳಿಗೆ
ಮೈಯೆಲ್ಲಾ ಕಲ್ಲಾದಾಗ – ರಾಮನ ಸ್ಪರ್ಶಕ್ಕೆ
ಕಾಲ ಉರುಳುತಿದೆ – ಭೂತದ ಚಕ್ರಗಳಲಿ
ಬರೆ ಎಂಜಲು – ಸ್ಪರ್ಶಕ್ಕೆ ಕರಟಿದೆ
ನಿತ್ಯವೂ ಬದುಕಿದ ಪುಟಗಳಲಿ.

ಮೈಯೆಲ್ಲಾ ಸುಕ್ಕುಗಟ್ಟಿದ ತೊಗಟೆ
ಕರ್‍ರಗಾದ ಶಿಲೆ
ಜೀವ ಕಳಚುವ ದೇಹದ ಅವಸ್ಥೆ
ಏಳಲಾರದ ಬತ್ತಿದ ಉಗಿಯ ಹೊಗೆ
ಬದಲಾಗದ ಕರೆ
ಚಿಗುರದ ದಿನಗಳು – ನಿತ್ಯದ ಎಣಿಕೆ.

– ನಜೀರ ಚಂದಾವರ

ವಿಚಾರ ದೀಪ್ತಿ

ಇತ್ತೀಚಿನ ದೃಶ್ಯ ಮತ್ತು ಮುದ್ರಣ ಮಾಧ್ಯಮ ಹಾಗೂ ಮತ್ತಿತರ ಬರವಣಿಗೆಗಳಲ್ಲಿ 'ಡೊಂಬರಾಟ' ಎಂಬ ಪದವನ್ನು ಅತಿ ರಂಜಿತವಾಗಿ ಮತ್ತು ನಕಾರಾತ್ಮಕ ಅರ್ಥದಲ್ಲಿ ಬಳಸಲಾಗುತ್ತಿದೆ. ಅದರಲ್ಲೂ ಇತ್ತೀಚಿನ ರಾಜಕೀಯ ಪಕ್ಷಗಳ ಕ್ಷುದ್ರತೆಯನ್ನು ಸಂಕೇತಿಸಲು ಮತ್ತು ಅವುಗಳ ಅವಕಾಶವಾದಿ ಭ್ರಷ್ಟ ರಾಜಕೀಯ ನಡೆಗಳನ್ನು ವಿಡಂಬಿಸಲು 'ಡೊಂಬರಾಟ' ಎಂಬ ಪದವನ್ನು ಬಳಸಲಾಗುತ್ತಿದೆ. 'ಡೊಂಬರಾಟ' ಎಂಬ ಪದ ಕೇವಲ ಒಂದು ಭಾಷಿಕ ಪದವಲ್ಲ, ಅದು ಒಂದು ಸಮುದಾಯದ ವೃತ್ತಿಯನ್ನು ಸೂಚಿಸುವ ಪದ. ಶತಮಾನಗಳಿಂದ ಒಂದು ಕೆಳಜಾತಿ ಸಮುದಾಯವು ನಿಕೃಷ್ಟ ಅವಮಾನಗಳ ಜೊತೆಗೆ ಹೊಟ್ಟೆಪಾಡಿನ ಅನಿವಾರ್ಯತೆಯ ಕಾರಣಕ್ಕಾಗಿ ಅವಲಂಬಿಸಿಕೊಂಡು ಬಂದ ಕಸಬು 'ಡೊಂಬರಾಟ'.

ನಿಶ್ಚಿತ ಆರ್ಥಿಕ ಮೂಲಗಳಿಲ್ಲದೆ, ಬೀದಿ ಬದಿಯಲ್ಲಿ ಒಂದು ಹೊತ್ತಿನ ಊಟಕ್ಕಾಗಿ ಡೊಂಬರು ಈ ವೃತ್ತಿಯನ್ನು ಇವತ್ತಿಗೂ ಅವಲಂಬಿಸಿ ಬದುಕುತ್ತಿದ್ದಾರೆ. ಡೊಂಬರಾಟ ಮಾಡುವ ಸಂದರ್ಭದಲ್ಲಿ ಪ್ರದರ್ಶನ ನೀಡುವ ಡೊಂಬರಾಟದವರು ದೈಹಿಕವಾಗಿ ಸದೃಢರಾಗಿರಬೇಕಾಗುತ್ತದೆ. ಏಕಾಗ್ರತೆ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಂಡು ತಮ್ಮ ದೇಹವನ್ನು ನೂರಕ್ಕೆ ನೂರು ಈ ಪ್ರದರ್ಶನದ ಸಂದರ್ಭದಲ್ಲಿ ತೊಡಗಿಸಬೇಕಾಗುತ್ತದೆ. ಈ ತೊಡಗಿಸಿಕೊಳ್ಳುವಿಕೆಯಲ್ಲಿ ಸ್ವಲ್ಪ ಏರುಪೇರಾದರೂ ಪ್ರದರ್ಶನ ನೀಡುವವನ ಜೀವಕ್ಕೆ ಸಂಚಕಾರ ಬರುತ್ತದೆ. ಪ್ರದರ್ಶನದ ಮಟ್ಟಿಗೆ ಮಾತ್ರವಲ್ಲದೆ ನಿತ್ಯದ ಜೀವನದಲ್ಲೂ ಡೊಂಬರಾಟವನ್ನು ತನ್ನ ದೇಹ ಮತ್ತು ಮನಸ್ಸುಗಳ ಮಧ್ಯೆ ಸಮತೋಲನ ಸಾಧಿಸುವ ನಿರಂತರ ಪ್ರಯತ್ನದಲ್ಲಿರುತ್ತಾನೆ. ಡೊಂಬರವನಿಗೆ ಈ ಪ್ರಾಮಾಣಿಕ ತದ್ಯಾತ್ಮ ಅನಿವಾರ್ಯ. ಈ ತದ್ಯಾತ್ಮವೇ ಅವನ ದೇಹವನ್ನು ಅದ್ಭುತ ಕಸರತ್ತುಗಳಿಗೆ ಹುರಿಗೊಳಿಸುತ್ತದೆ. ಜನರನ್ನು ರಂಜಿಸಲು ಮತ್ತು ಒಂದು ಹೊತ್ತಿನ ಊಟಕ್ಕೆ ದಾರಿ ಮಾಡಿಕೊಳ್ಳಲು ಡೊಂಬರವನು ಪ್ರಾಮಾಣಿಕವಾಗಿ ಬೆವರು ಹರಿಸಲೇಬೇಕು. ಇಂತಹ ಪ್ರಾಮಾಣಿಕ ಶ್ರಮರೂಪವಾದ ಡೊಂಬರಾಟವನ್ನು, ರಾಜಕಾರಣಿಗಳ ನಡೆಗಳನ್ನು ಸಂಕೇತಿಸಲು ಬಳಸುವುದು ನ್ಯಾಯವೇ?

ಇಂದಿನ ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು ಏನೇನು ಮಾಡುತ್ತಿವೆ ಎಂದು ವಿವರಿಸುವ ಅಗತ್ಯವಿಲ್ಲ. ಜನರನ್ನು ಶೋಷಣೆ ಮಾಡುವ ಹಳೆಯ ಮೋಸದ ವಿಧಾನಗಳಿಗೆ ದಿನವೂ ಈ ಜನ ಹೊಸ ರೂಪು ಕೊಡುತ್ತಿದ್ದಾರೆ. ಜನ ಸಂಪತ್ತನ್ನು ಹಗಲೇ ದರೋಡೆ ಮಾಡುವ ಭಂಡತನವನ್ನು ರೂಢಿಸಿಕೊಂಡೂ ಭಾರಿ ಪ್ರಾಮಾಣಿಕತೆಯನ್ನು ಪ್ರದರ್ಶಿಸಲು ಹೆಣಗಾಡುತ್ತಾರೆ. ದುಡಿವ ಜನರ ಬೆವರಿನಿಂದ ಸಂಪತ್ತನ್ನು ನಿರ್ಲಜ್ಜವಾಗಿ ಲೂಟಿ ಹೊಡೆಯುತ್ತಿದ್ದಾರೆ. ಇಂತಹ ಹಗಲು ದರೋಡೆಕೋರರ ಕೃತ್ಯಗಳನ್ನು 'ಡೊಂಬರಾಟ' ಎಂಬ ಪದದಲ್ಲಿ ಬಣ್ಣಿಸುವುದು ಸಮಂಜಸವೇ? ಶೋಷಿತ ಸಮುದಾಯದ ಹೊಟ್ಟೆಪಾಡಿನ ವೃತ್ತಿಗೆ ಮತ್ತು ಅದರ ಪ್ರಾಮಾಣಿಕ ಶ್ರಮಕ್ಕೆ ಕಿಂಚಿತ್ತೂ ಬೆಲೆಕೊಡದ ಹೊಣೆಗೇಡಿ ಪದಪ್ರಯೋಗವಿದು. ಡೊಂಬರಾಟದಲ್ಲಿ ವಂಚನೆಗಳಿರುವುದಿಲ್ಲ ಮತ್ತು ತೆರೆಮರೆಯ ಕುತಂತ್ರಗಳಿರುವುದಿಲ್ಲ. ಆದರೆ ವಿವಿಧ ಮಾಧ್ಯಮಗಳಲ್ಲಿ ಹೀನ ರಾಜಕಾರಣದ ನಡೆಗಳನ್ನು ವಿಡಂಬಿಸಲು, ರಾಜಕಾರಣಿಗಳ ನಯವಂಚನೆಗೆ ಶತಮಾನಗಳಿಂದ ಅವಮಾನಕ್ಕೀಡಾಗುತ್ತಿದ್ದಾರೆ.

ಆದರೂ ತಮ್ಮ ಪ್ರಾಮಾಣಿಕ ಶ್ರಮದಿಂದ ದುಡಿದು ಬದುಕುತ್ತಿದ್ದಾರೆ. ಇಂತಹ ಜನರ ವೃತ್ತಿಯನ್ನು ಗೇಲಿ ಮಾಡುವುದು ಜಾತ್ಯಾತೀತ ಸಮಾಜದಲ್ಲಿ ಬದುಕುವ, ಅದರಲ್ಲೂ

ಜನರ ಅಭಿಪ್ರಾಯ ಮೂಡಿಸುವ ಮತ್ತು ಜನರ ಅಭಿರುಚಿಗಳನ್ನು ತಿದ್ದುವ ಸಾರಸ್ವತ ಜಗತ್ತಿನ ಪಂಡಿತರಿಗೆ ಶೋಭೆ ತರದು.

ಈ ಬಗೆಯ ಪದಪ್ರಯೋಗದಿಂದ ಒಂದು ಸಮುದಾಯ ಕುಗ್ಗಿ ಹೋಗುತ್ತದೆ. ಜೊತೆಗೆ ಇಂತಹ ಭಾಷಿಕ ಪ್ರಯೋಗವು ಜನಾಂಗೀಯ ನಿಂದನೆಯಾಗುತ್ತದೆ. ಡೊಂಬರ ಸಮುದಾಯ ಈಗಷ್ಟೇ ಎಚ್ಚೆತ್ತುಕೊಂಡು ಮುಖ್ಯ ವಾಹಿನಿಯಲ್ಲಿ ಸ್ವಾಭಿಮಾನದಿಂದ ಬದುಕಲು ಯತ್ನಿಸುತ್ತಿದೆ. ದಯವಿಟ್ಟು 'ಡೊಂಬರಾಟ' ಎಂಬ ಪದವನ್ನು ಹೀನ ಅರ್ಥದ ಪ್ರಯೋಗಗಳಿಗೆ ಬಳಸಬಾರದೆಂದು ಕನ್ನಡದ ಸಾರಸ್ವತ ಲೋಕವನ್ನು ಮತ್ತು ಮಾಧ್ಯಮಗಳನ್ನು ಡೊಂಬರ ಸಮಾಜವು ಅತ್ಯಂತ ವಿನಯದಿಂದ ಕೇಳಿ ಕೊಳ್ಳುತ್ತದೆ. ಇಂತಹ ಪದ ಪ್ರಯೋಗ ದೃಶ್ಯ ಮಾಧ್ಯಮ ಇಲ್ಲವೆ ಮುದ್ರಣ ಮಾಧ್ಯಮಗಳಲ್ಲಿ ಬಳಕೆಗೊಂಡಲ್ಲಿ ಡೊಂಬರ ಸಮುದಾಯದ ಪ್ರತಿಭಟನೆಯನ್ನು ಮತ್ತು ಜಾತಿ ನಿಂದನೆಯ ಗುರುತರ ಆಪಾದನೆಯನ್ನು ಎದುರಿಸಬೇಕಾಗುತ್ತದೆ.

– ಬಿ.ಎಂ. ಕೌಜಲಗಿ

'ಜನಪದ ವಿಚಾರ' ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ ೪ (ವಿಧಿ ೮)

೧. ಪ್ರಕಟಣೆಯ ಸ್ಥಳ	: ಮೇಲುಕೋಟೆ
೨. ಪ್ರಕಟಣೆಯ ನಿಯತಕಾಲಕೆ	: ಮಾಸಿಕ
೩. ಮುದ್ರಕರ ಹೆಸರು	: ಲ. ಬಾಲಕೃಷ್ಣ
ಭಾರತದ ಪ್ರಜೆಯೆ ?	: ಹೌದು
ವಿಳಾಸ	: ಇಂದೀವರ ಮುದ್ರಣಾಲಯ ನಾಗಮಂಗಲ, ಮಂಡ್ಯ ಜಿಲ್ಲೆ
೪. ಸಂಪಾದಕರ ಹೆಸರು	: ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ ?	: ಹೌದು
ವಿಳಾಸ	: ಜನಪದ ಸೇವಾ ಟ್ರಸ್ಟ್, ಮೇಲುಕೋಟೆ ಮಂಡ್ಯ ಜಿಲ್ಲೆ – ೫೭೧ ೪೩೧
೫. ಸಂಪಾದಕರ ಹೆಸರು	: ಸುರೇಂದ್ರ ಕೌಲಗಿ
ಭಾರತದ ಪ್ರಜೆಯೆ ?	: ಹೌದು
ವಿಳಾಸ	: ಜನಪದ ಸೇವಾ ಟ್ರಸ್ಟ್, ಮೇಲುಕೋಟೆ ಮಂಡ್ಯ ಜಿಲ್ಲೆ – ೫೭೧ ೪೩೧
೬. ಮಾಲೀಕರ ಹೆಸರು	: ಜನಪದ ಸೇವಾ ಟ್ರಸ್ಟ್
ವಿಳಾಸ	: ಮೇಲುಕೋಟೆ, ಮಂಡ್ಯ ಜಿಲ್ಲೆ

ಈ ಕೆಳಗೆ ರುಜು ಮಾಡಿರುವ ಸುರೇಂದ್ರ ಕೌಲಗಿ ಆದ ನಾನು ಮೇಲೆ ತಿಳಿಸಲಾದ ವಿವರಗಳು ನಮಗೆ ತಿಳಿದ ಮಟ್ಟಿಗೆ ಸತ್ಯ ಎಂದು ದೃಢೀಕರಿಸುತ್ತೇನೆ.

ದಿನಾಂಕ : ೩೧-೦೧-೨೦೦೮ ಸಹಿ,

ಸ್ಥಳ : ಮೇಲುಕೋಟೆ ಸುರೇಂದ್ರ ಕೌಲಗಿ, ಪ್ರಕಾಶಕ

ಗಣರಾಜ್ಯಕ್ಕೆ ಗ್ರಾಮರಾಜ್ಯದ ಮೆರಗು ಬೇಕು

- *ಸುರೇಂದ್ರ ಕೌಲಗಿ*

"ಒಂದು ರಾಷ್ಟ್ರದ ಪರಿಸ್ಥಿತಿಯನ್ನು ದೇವರು ಬದಲಾಯಿಸುವುದಿಲ್ಲ. ಆ ರಾಷ್ಟ್ರವೇ ತನ್ನನ್ನು ತಾನು ಬದಲಾಯಿಸಿಕೊಳ್ಳಲು ಪ್ರಯತ್ನಿಸಬೇಕು."

- *ಅಬ್ದುಸ್ ಸಲಾಮ್*

ಪ್ರತಿವರ್ಷದಂತೆ ಗಣರಾಜ್ಯೋತ್ಸವ ಬಂತು ಮತ್ತು ಹೋಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ೫೯ ಬಾರಿ ಗಣರಾಜ್ಯೋತ್ಸವದ ಆಚರಣೆಯಾಗಿ ಹೋಗಿದೆ. ಮುಂದೆಯೂ ಬರುತ್ತಲೇ ಹೋಗುತ್ತದೆ. ಹಾಗೆ ಗಣರಾಜ್ಯೋತ್ಸವ ಬಂದಾಗಲೆಲ್ಲ ದಿಲ್ಲಿಯ ಜನಪಥದಲ್ಲಿ ವರ್ಣರಂಜಿತ ಮೆರವಣಿಗೆ ನಡೆಯುತ್ತದೆ, ಜೊತೆಗೆ ದೇಶ ವರ್ಷದಿಂದ ವರ್ಷಕ್ಕೆ ತನ್ನ ರಕ್ಷಣಾ ಪಡೆಯ ಬಲವನ್ನು ಹೆಚ್ಚಿಸಿಕೊಂಡ ಸಾಮರ್ಥ್ಯದ ದ್ಯೋತಕವಾಗಿ ವಿವಿಧ ಬಗೆಯ ಯುದ್ಧ ಟ್ಯಾಂಕುಗಳು, ವಿಮಾನಗಳು, ಕ್ಷಿಪಣಿಗಳು ಇತ್ಯಾದಿಗಳ ಪ್ರದರ್ಶನವೂ ಆಗುತ್ತದೆ. ಭಾರತ ಹೇಗೆ ಬಲಾಢ್ಯ ದೇಶವಾಗಿ ಬೆಳೆಯುತ್ತಿದೆ ಎಂಬುದರ ಸಾಕ್ಷಿಯಾಗಿರಲು ಜಗತ್ತಿನ ಯಾವುದಾದರೊಂದು ದೇಶದ ಅಧ್ಯಕ್ಷರನ್ನು ಮುಖ್ಯ ಅತಿಥಿಯನ್ನಾಗಿ ಬರಮಾಡಿಕೊಳ್ಳಲಾಗುತ್ತದೆ. ದೇಶದ ರಕ್ಷಣೆಯಲ್ಲಿ ವೀರಮರಣ ಹೊಂದಿದವರಿಗೆ ಅಶೋಕಚಕ್ರದಿಂದ ಸನ್ಮಾನಿಸಲಾಗುತ್ತದೆ. ದೇಶದ ಪ್ರತಿರಾಜ್ಯವೂ ಈ ಮಹಾನ್ ಗಣರಾಜ್ಯದಲ್ಲಿ ತನ್ನ ಅಸ್ತಿತ್ವವನ್ನು ತೋರಿಸುವುದಕ್ಕಾಗಿ, ಸ್ತಬ್ಧ ಚಿತ್ರದ ವಾಹನವನ್ನು ಮೆರೆಸುತ್ತದೆ. ಶೌರ್ಯ ತೋರಿಸಿದ ಬಾಲಕರನ್ನು ಅಲಂಕೃತ ಒಂಟೆಯ ಮೇಲೆ ಕುಳ್ಳಿರಿಸಿ ಜನಸಮೂಹದ ಮುಂದೆ ಕರೆತಂದು ಅವರನ್ನು ರಂಜಿಸುತ್ತದೆ. ಈ ಎಲ್ಲ ಸಂಭ್ರಮ, ಸಡಗರದ ಮೊದಲು ರಾಷ್ಟ್ರಪತಿ ರಾಷ್ಟ್ರಧ್ವಜ ಹಾರಿಸುತ್ತಾರೆ. ಅಲ್ಲದೆ ಗಣರಾಜ್ಯೋತ್ಸವದ ಮುನ್ನಾದಿನ ರಾಷ್ಟ್ರವನ್ನು ಉದ್ದೇಶಿಸಿ ಭಾಷಣಮಾಡುತ್ತಾ ದೇಶ ಇದುವರೆಗೆ ಎಲ್ಲ ಕ್ಷೇತ್ರಗಳಲ್ಲಿ ಸಾಧಿಸಿರುವ ಅಗಾಧ ಪ್ರಗತಿಯ ಚಿತ್ರವನ್ನು ದೇಶವಾಸಿಗಳ ಮುಂದೆ ಬಿಚ್ಚಿಡುತ್ತಾರೆ. ಹಾಗೆಯೇ ಮುಂದಿನ ವರ್ಷಗಳಲ್ಲಿ ಸಾಧಿಸಬೇಕಾಗಿರುವ ಅಗಾಧ ಸಾಧನೆಯ ಬಗ್ಗೆ ತಿಳಿಸುತ್ತಾರೆ.

ಇದು ಪ್ರತಿವರ್ಷ ಗಣರಾಜ್ಯೋತ್ಸವದಂದು ದೇಶದ ರಾಜಧಾನಿಯ ಜನಪಥದಲ್ಲಿ ನಡೆದುಕೊಂಡು ಬಂದ ಕಾರ್ಯಕ್ರಮ. ಹೆಚ್ಚು ಕಡಿಮೆ ದಿಲ್ಲಿಯ ಕಾರ್ಯಕ್ರಮದ ಪಡಿಯಚ್ಚಿನಂಥ ಕಾರ್ಯಕ್ರಮ ದೇಶದ ಎಲ್ಲ ರಾಜ್ಯಗಳ ಎಲ್ಲ ರಾಜಧಾನಿಗಳಲ್ಲಿ ನಡೆಯುತ್ತದೆ. ದೇಶದುದ್ದಕ್ಕೂ ಗಣರಾಜ್ಯೋತ್ಸವದ ಏಕತಾನತೆ ಇರುತ್ತದೆ. ಇದು ಇನ್ನೂ ಮುಂದಕ್ಕೆ ಹೋಗಿ ದೇಶದ ಎಲ್ಲ ಮುನ್ನೂರು ಜಿಲ್ಲೆಗಳಲ್ಲೂ ಪ್ರತಿಧ್ವನಿಸುತ್ತದೆ. ಎಲ್ಲೆಲ್ಲಿ ಶಾಲೆ-ಕಾಲೇಜುಗಳಿವೆಯೋ ಅಲ್ಲೆಲ್ಲ ಗಣರಾಜ್ಯೋತ್ಸವ ನಡೆಯುತ್ತದೆ.

ದಿಲ್ಲಿಯ ಜನಪಥದಲ್ಲಿಯ ಉತ್ಸವ ನೋಡಲು ಜನ ಬರುವುದಕ್ಕೆ ಕಾರಣ ಆ ಉತ್ಸವದಲ್ಲಿರುವ ರಂಗು. ಇನ್ನು ಉಳಿದ ಸ್ಥಳಗಳಲ್ಲಿ ನಡೆಯುವ ಉತ್ಸವ ಕೇವಲ

ಔಪಚಾರಿಕ. ಅದು ಗಣರಾಜ್ಯೋತ್ಸವ ಆಗಿದ್ದರೂ ಜನಗಣಮನ ಇಲ್ಲದ ನೀರಸ ಉತ್ಸವ. ವೈಚಾರಿಕತೆ ಹಿಂದೆ ಸರಿದಿರುತ್ತದೆ, ಆಡಂಬರ, ಶುಷ್ಕ ಭಾಷಣ ಮುಂದಿರುತ್ತದೆ. ಫಲವಾಗಿ ಮುಂದಿನ ಗಣರಾಜ್ಯೋತ್ಸವ ಇನ್ನೂ ಹೆಚ್ಚು ನೀರಸವಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಗುಣವೇ ಇಲ್ಲದ ಗಣರಾಜ್ಯೋತ್ಸವದ ಚಕ್ರ ಸುತ್ತುತ್ತಾ ನಿಂತಲ್ಲಿಯೇ ನಿಂತಿರುತ್ತದೆ.

ಒಂದು ಗಣರಾಜ್ಯೋತ್ಸವದಿಂದ ಇನ್ನೊಂದು ಗಣರಾಜ್ಯೋತ್ಸವದ ಮಧ್ಯದ ಅವಧಿ ದೇಶದ ಗಣರಾಜ್ಯ ಪದ್ಧತಿಗೆ ಸವಾಲಾದ ಅನೇಕ ಸಮಸ್ಯೆಗೆ ಆಗರವಾಗಿರುತ್ತದೆ. ಸಂವಿಧಾನ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿರುತ್ತದೆ. ಅದರಲ್ಲಿ ಪ್ರಾಣವಾಯುವನ್ನು ತುಂಬುವ ಕೆಲಸವನ್ನು ನ್ಯಾಯಾಂಗ ಮಾಡುತ್ತಲೇ ಇರುತ್ತದೆ. ಇದರ ಪರಿಣಾಮವಾಗಿ ಶಾಸಕಾಂಗ ಮತ್ತು ನ್ಯಾಯಾಂಗದ ಮಧ್ಯ ಶೀತಲ ಸಮರ ಉಂಟಾಗುತ್ತದೆ. ಈ ಎರಡು ಅಂಗಗಳ ಮಧ್ಯದ ಜಗಳದಲ್ಲಿ ಜನರೊಂದಿಗೆ ನೇರವಾದ ಸಂಪರ್ಕ ಹೊಂದಿರುವ ಕಾರ್ಯಾಂಗ ಅತಂತ್ರವಾಗಿಬಿಡುತ್ತದೆ. ಕೆಲವೊಂದು ಸಲ ಎಂಥ ಭೀಕರ ಪರಿಸ್ಥಿತಿ ಉಂಟಾಗುತ್ತದೆಂದರೆ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗಗಳು ಏಕಕಾಲಕ್ಕೆ ಪರಸ್ಪರ ಘರ್ಷಣೆಗೆ ಇಳಿಯುತ್ತವೆ. ಪರಿಣಾಮವಾಗಿ ಸಂವಿಧಾನದ ಆಶಯಗಳು ಗಾಳಿಗೆ ತೂರಿ ಹೋಗುತ್ತವೆ. ದೇಶದಲ್ಲಿ ಒಂದು ಬಗೆಯ ಅರಾಜಕತೆ ಉಂಟಾಗುತ್ತದೆ. ಈ ಅರಾಜಕತೆಗೆ ಪೋಷಣೆಕೊಡುವ ರೀತಿಯಲ್ಲಿ ಚುನಾವಣೆಗಳು ಪಾತ್ರವಹಿಸುತ್ತವೆ.

ಈ ಸಲದ ಗಣರಾಜ್ಯೋತ್ಸವದ ಪ್ರಾರಂಭ ಎರಡು ವೈರುಧ್ಯ ಬೆಳವಣಿಗೆಯೊಂದಿಗೆ ಪ್ರಾರಂಭವಾಯಿತು. ಒಂದು, ರತನ್ ಟಾಟಾ ಬಿಡುಗಡೆ ಮಾಡಿದ ಕಡಿಮೆ ಬೆಲೆಯ ಕಾರುಗಳ ಬಿಡುಗಡೆ. ಚಿಕ್ಕ ಕಾರಿನ ಈ ಸುದ್ದಿ ಎಷ್ಟು ಪ್ರಮುಖವಾಯಿತೆಂದರೆ ಗಣರಾಜ್ಯದ ಭವಿಷ್ಯದ ಬಗ್ಗೆ ಚಿಂತನೆಗೆ ಗ್ರಹಣ ಹಿಡಿಯಿತು. ಇಡೀ ದೇಶದ ಮಹಾ ಉನ್ನತಿ ಈ ಕಾರಿನ ಉತ್ಪಾದನೆಯಲ್ಲಿ, ಜನಸಾಮಾನ್ಯರಿಂದ ಅದರ ಬಳಕೆಯಲ್ಲಿಯೇ ಇದೆ ಎಂದು ಬಿಂಬಿಸಲಾಯಿತು. ದೇಶದ ಆರ್ಥಿಕ ಮತ್ತು ಕೈಗಾರಿಕೆತೆಯ ಅಭಿವೃದ್ಧಿಯ ಸಂಕೇತವಾಗಿ ನ್ಯಾನೋ ಕಾರಿನ ಬಾವುಟ ಹಾರಾಡಿತು. ಗಣರಾಜ್ಯದ ಬಾವುಟಕ್ಕಿಂತ ನ್ಯಾನೋ ಕಾರಿನ ಬಾವುಟಕ್ಕೆ ಹೆಚ್ಚಿನ ಮಹತ್ವ ದೊರೆಯಿತು. ನ್ಯಾನೋ ಕಾರಿನ ಪ್ರವರ್ತಕ ರತನ್ ಟಾಟಾಗೆ ಪದ್ಮ ವಿಭೂಷಣ ಪ್ರಶಸ್ತಿಯನ್ನು ಕೊಟ್ಟು ಗೌರವಿಸಾಲಾಯಿತು. ಒಂದು ಲಕ್ಷದ ಮೂವತ್ತು ಸಾವಿರ ರೂಪಾಯಿಗಳ ಈ ಕಾರು ಮಸಾಲೆ ದೋಸೆಯಷ್ಟು ಜನಪ್ರಿಯವಾಯಿತು. ದೇಶದ ಒಂದು ನೂರು ಹದಿನೈದು ಕೋಟಿ ಜನಸಂಖ್ಯೆಯಲ್ಲಿ ಮುಕ್ಕಾಲು ಭಾಗ ಜನ ಬಡತನದ ರೇಖೆಗಿಂತ ಕಡಿಮೆ ಆದಾಯದವರಿದ್ದಾರೆ, ಅವರಿಗೆ ಆಶ್ರಯವಿಲ್ಲ, ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ, ಆಹಾರ ಬೆಳೆಗಳಿಗೆ ಬೆಲೆ ದೊರೆಯುತ್ತಿಲ್ಲ, ರೈತರು ನಿರಂತರವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬೆಲ್ಲ ಮಾತುಗಳು ಮೊಸಳೆಯ ಕಣ್ಣೀರು ಎಂಬಂತೆ ನ್ಯಾನೋ ಕಾರಿನ ಬಗ್ಗೆ ಜನಸಾಮಾನ್ಯರು ತಮ್ಮ ಪ್ರೀತಿಯನ್ನು ತೋರಿಸಿ ಗಣರಾಜ್ಯ ಕುರಿತು ಜನರ ಚಿಂತನೆ, ಅಗತ್ಯಗಳು; ದೇಶದ ರಾಜಕಾರಣಿಗಳ

ಮತ್ತು ಕೈಗಾರಿಕೋದ್ಯಮಿಗಳ ಮತ್ತು ನೀತಿ ನಿರೂಪಕರ ಆದ್ಯತೆಗಳು ಎಷ್ಟು ಜೊಳ್ಳು, ಎಷ್ಟು ಗಟ್ಟಿ ಎಂಬುದನ್ನು ಅನಾವರಣಗೊಳಿಸಿದರು.

ವೈರುಧ್ಯಗಳಲ್ಲಿ ಇನ್ನು ಎರಡನೆಯದು ೩೬ ಲಕ್ಷ ಸಾವಿರ ಕೋಟಿ ರೂಪಾಯಿಗಳ ಹನ್ನೊಂದನೇ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದದ್ದು. ಪಂಚವಾರ್ಷಿಕ ಯೋಜನೆಯು ಹೊಂದಿರುವ ಅಭಿವೃದ್ಧಿಯ ಗುರಿಗಳಿಗೂ ನ್ಯಾನೋ ಕಾರಿನಂಥ ಉದ್ಯಮಗಳಿಗೆ ದೊರೆಯುವ ಪ್ರಾಶಸ್ತ್ಯಕ್ಕೂ ಸಂಬಂಧವೇ ಇಲ್ಲದಂಥ ಪರಿಸ್ಥಿತಿಯನ್ನು ಸರ್ಕಾರ ನಿರ್ಮಿಸಿದ್ದು.

ಪಂಚವಾರ್ಷಿಕ ಯೋಜನೆ ಜನಮುಖಿಯಾಗಿದ್ದರೆ, ನ್ಯಾನೋ ಕಾರಿನಂಥ ಉದ್ಯಮಗಳ ಪರಿಣಾಮ ಜನಹಿತ, ಪರಿಸರ ಹಿತ, ಸಮಾಜ ಹಿತಕ್ಕೆ ವಿರೋಧವಾಗಿ ಪರಿಣಮಿಸಲಿದೆ. ನ್ಯಾನೋ ಕಾರಿನ ಜನ್ಮವೇ ನಂದಿಗ್ರಾಮದ ರೈತರ ರಕ್ತದ ಓಕುಳಿಯಲ್ಲಿ ಆಗಿದೆ. ಸಣ್ಣ ಕಾರಿನ ಉತ್ಪಾದನೆ ಕಾಲ ಕ್ರಮೇಣ ಇನ್ನು ಬೇರೆ ಕಾರು ಕಂಪನಿಗಳ ಉದ್ಯಮವಾಗಲಿದೆ. ಆಗ ಇನ್ನೂ ಹೆಚ್ಚಿನ ರಕ್ತಪಾತ, ಭೂ ಗ್ರಹಣ, ನಿರಾಶ್ರಿತರ ಗೋಳು ಉಂಟಾಗಲಿದೆ. ಪಂಚವಾರ್ಷಿಕ ಯೋಜನೆ ಸಾಧಿಸ ಹೊರಟಿರುವುದನ್ನು ಅಥವಾ ಸಾಧಿಸುವುದನ್ನು ಕಾರು ಉತ್ಪಾದನೆ ಉದ್ಯಮ ಕುಂಠಿತಗೊಳಿಸಲಿದೆ.

ಹನ್ನೊಂದನೇ ಪಂಚ ವಾರ್ಷಿಕ ಯೋಜನೆ ಮತ್ತು ಕಡಿಮೆ ಬೆಲೆಯ ಚಿಕ್ಕ ಕಾರುಗಳ ಉತ್ಪಾದನಾ ಯೋಜನೆ ಒಟ್ಟು ನಮ್ಮ ದೇಶದ ಗಣರಾಜ್ಯ ಸುಭದ್ರವಾಗುವತ್ತ ಕೊಂಡೊಯ್ಯದೆ ಅಭದ್ರವಾಗುವತ್ತ ಕೊಂಡೊಯ್ಯುವ ಬೀಜಗಳನ್ನು ತಮ್ಮ ಒಡಲಲ್ಲಿ ಹೊಂದಿವೆ. ಕಾಲ ಕ್ರಮಿಸಿದಂತೆ ಈ ಯೋಜನೆಗಳ ಭೀಕರ ಪರಿಣಾಮದ ಪುಟಗಳು ತೆರೆಯುತ್ತಾ ಹೋಗುವುದು.

ಗಣರಾಜ್ಯೋತ್ಸವದ ನಾಲ್ಕು ದಿನಗಳ ಮೊದಲಷ್ಟೆ ಷೇರು ಪೇಟೆಯಲ್ಲಿ ಉಂಟಾಗಿದ್ದ ಬಿರುಗಾಳಿಯ ಆತ್ಮಘಾತಕತೆಯ ಪರಿಣಾಮದಿಂದ ಇನ್ನೂ ಚೇತರಿಸಿಕೊಳ್ಳಬೇಕಾಗಿದೆ. ಅಲ್ಲದೆ, ಭಾರತದ ಆರ್ಥಿಕ ಸ್ಥಿತಿ ಎಷ್ಟೇ ಸದೃಢವಾಗಿದೆಯೆಂದು ಭಾವಿಸಲಾಗಿದ್ದರೂ ಸ್ವಾತಂತ್ರ್ಯದ ಅರವತ್ತು ಮೂರು ವರ್ಷಗಳ ನಂತರವೂ ದೇಶದ ಅರ್ಥ ವ್ಯವಸ್ಥೆ ಅಮೆರಿಕಾದ ಅರ್ಥವ್ಯವಸ್ಥೆಯ ಏರಿಳಿತಗಳನ್ನೇ ಅವಲಂಬಿಸಿದೆ ಎಂಬುದು ಸ್ಥಿರವಾಯಿತು. ಜೊತೆಗೆ ನಮ್ಮ ಗಣರಾಜ್ಯವು ಬಹಿರಂಗವಾಗಿ ರಾಜಕೀಯ ಬಲಾಢ್ಯತನವನ್ನು ಪ್ರಕಟಗೊಳಿಸುತ್ತಿದ್ದರೂ ಆಂತರಿಕವಾಗಿ ಆರ್ಥಿಕ ದುರ್ಬಲತೆಯನ್ನೇ ಹೊಂದಿದೆ ಎಂಬುದು ಋಜುವಾತಾಯಿತು. ಅಂದರೆ ನಮ್ಮ ದೇಶ ಇನ್ನೂ ರಾಜಕೀಯವಾಗಿ ಮಾತ್ರ ಸ್ವತಂತ್ರವಾಗಿದೆಯೇ ಹೊರತು ಆರ್ಥಿಕವಾಗಿ ಪರತಂತ್ರ್ಯವೇ ಆಗಿದೆ ಎಂಬ ಸತ್ಯವು ನಗ್ನವಾಗಿ ಹೊರಹೊಮ್ಮಿತು. ಭಾರತ ಗಣರಾಜ್ಯದ ಸ್ಥಾಪನೆಯಾಗಿ ೬೫ ವರ್ಷಗಳಾದರೂ ಸಂವಿಧಾನದಲ್ಲಿಯ ಆಶಯವಾದ ಸಾಮಾಜಿಕ ಅಭಿವೃದ್ಧಿಯಾಗದೇ ಇರುವುದರಿಂದ ಜಾತಿವಾರು, ಧರ್ಮವಾರು, ಲಿಂಗವಾರು, ಪ್ರದೇಶವಾರು ಮೀಸಲಾತಿಯ ವಿಚಾರ ದೇಶದಾದ್ಯಂತ ಪ್ರಬಲವಾಗಿಯೇ ಉಳಿದುಕೊಂಡು ಬಂದಿದೆ. ಚುನಾವಣೆಗಳು

ಬಂದಾಗಲಂತೂ ಆ ವಿಚಾರಕ್ಕೆ ಪ್ರಚೋದನೆ ದೊರೆಯುತ್ತದೆ. ಜೊತೆಗೆ ಬಹುಸಂಖ್ಯಾತರು, ಅಲ್ಪ ಸಂಖ್ಯಾತರು ಎಂಬ ಭೇದಭಾವ ಚಿಗುರೊಡೆಯುತ್ತದೆ. ಮೀಸಲಾತಿಯ ಆಕಾಂಕ್ಷೆ ಎಷ್ಟು ಪ್ರಬಲಗೊಂಡಿದೆ ಎಂದರೆ ಇಡೀ ಗಣರಾಜ್ಯ ಜಾತಿಯ ಆಧಾರದ ಮೇಲೆ ವಿವಿಧ ಸಮೂಹಗಳಲ್ಲಿ ಹರಿದು ಹಂಚಿಹೋಗಿದೆ. ರಾಜಕೀಯ ಕ್ಷೇತ್ರದಲ್ಲಂತೂ ಬಹುಸಂಖ್ಯಾತ ಅಲ್ಪ ಸಂಖ್ಯಾತ ಎಂಬ ವಿಚಾರ ನಮ್ಮ ಪ್ರಜಾರಾಜ್ಯ ಹಾಗೂ ಗಣರಾಜ್ಯದ ಬೇರುಗಳನ್ನು ಒಣಗಿಸುತ್ತಿವೆ. "ನಾಲ್ಕೂ ದಿಕ್ಕಿನಿಂದ ನನ್ನ ಮನೆಯಲ್ಲಿ ಸಂಸ್ಕೃತಿಯ ಗಾಳಿ ಬೀಸಲಿ", ಎಂದು ಗಾಂಧೀಜಿ ಹೇಳಿದ್ದರಾದರೂ ಅವರ ಈ ಆಶಯ ದೇಶದ ರಾಜಕೀಯ ಜೀವನದಲ್ಲಿ ಸ್ವೀಕೃತಗೊಂಡಿಲ್ಲ. ಯಾವುದೇ ಒಂದು ವಿಚಾರ ಎಷ್ಟೇ ನ್ಯಾಯ ಸಮ್ಮತವೂ, ನೀತಿ ಸಮ್ಮತವೂ ಆಗಿದ್ದರೂ ಕೂಡ ಅದು ಬಹುಸಂಖ್ಯಾತ ಜನರಿಗೆ ಒಪ್ಪಿಗೆ ಇಲ್ಲವೆಂದಾದರೆ ಆ ಸಾತ್ವಿಕ ವಿಚಾರ ತಲೆ ಮರೆಸಿಕೊಂಡು ಹೋಗಬೇಕಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಬಹುಸಂಖ್ಯಾತರು ಹೊಂದಿರುವ ಅಸಮ್ಮತ, ಅನೀತಿಯುತ ವಿಚಾರವನ್ನು ಅಲ್ಪ ಸಂಖ್ಯಾತರು ಮರು ಪ್ರಶ್ನೆ ಮಾಡದೆ ಒಪ್ಪಿಕೊಳ್ಳಬೇಕಾಗುತ್ತದೆ. ಹೀಗಾಗುವುದರಿಂದ ದೇಶದ ಸಾಮಾಜಿಕ ಜೀವನದಲ್ಲಿ ವಸ್ತುತಃ ಗಣರಾಜ್ಯದ ಅಣಕುವಾಟ ನಡೆಯುತ್ತದೆ. ಗಂಭೀರತಮವಾದ ಈ ದೋಷದ ನಿವಾರಣೆಯ ಬಗ್ಗೆ ದೇಶದ ಎಲ್ಲ ಕ್ಷೇತ್ರಗಳ ಎಲ್ಲ ನಾಯಕರು ವಿಶೇಷವಾಗಿ ಚಿಂತನೆ ನಡೆಸಬೇಕಿದೆ.

ಇತ್ತೀಚಿಗಿನ ಭಯಾನಕ, ಆತಂಕದ ಬೆಳವಣಿಗೆಯೇನೆಂದರೆ ನಕ್ಸಲವಾದ. ನಕ್ಸಲವಾದದ ಬೆಂಬಲಿಗರು ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟ ನಡೆಸುವುದಾದರೆ ಅದನ್ನು ಸ್ವಾಗತಿಸಬಹುದು. ಆದರೆ ಅವರು ತಮ್ಮ ವಿಚಾರದ ಸಮರ್ಥನೆಗಾಗಿ, ಅದರ ಸ್ಥಾಪನೆಗಾಗಿ ಹಿಂಸಾಚಾರಕ್ಕೆ ಇಳಿದಿದ್ದಾರೆ. ಗಣರಾಜ್ಯಕ್ಕೆ ಒಳಪಟ್ಟಿರುವ ಎಲ್ಲ ರಾಜ್ಯಗಳಲ್ಲಿ ನಕ್ಸಲವಾದಿಗಳು ಹುಟ್ಟಿಕೊಂಡಿದ್ದಾರೆ ನಿರಂತರ ಹಿಂಸಾಚಾರದಲ್ಲಿ ತೊಡಗಿ ಅಪಾರವಾದ ಪ್ರಾಣನಷ್ಟ ಮಾಡುವುದರ ಜೊತೆಗೆ ಸಾಮಾಜಿಕ ಕ್ಷೋಭೆಯನ್ನುಂಟುಮಾಡುತ್ತಿದ್ದಾರೆ. ನೆರೆ ದೇಶವಾದ ನೇಪಾಳದಲ್ಲಿ ನಕ್ಸಲವಾದದ ಅವಳಿ ವಾದವಾದ ಮಾವೋವಾದದ ಬೆಂಬಲಿಗರು ಅಲ್ಲಿ ತಮ್ಮದೇ ಸರ್ಕಾರವನ್ನು ರಚಿಸಿಕೊಳ್ಳುವಷ್ಟರ ಮಟ್ಟಿಗೆ ಬಲ ಹೆಚ್ಚಿಸಿಕೊಂಡಿದ್ದಾರೆ. ನೇಪಾಳದಲ್ಲಿ ಆದ ಹಿಂಸಾಯುಕ್ತ ರಾಜಕೀಯ ಬೆಳವಣಿಗೆಯ ಪ್ರಭಾವ ಭಾರತದ ನಕ್ಸಲವಾದಿಗಳ ಮೇಲೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ಪಕ್ಕದ ಇನ್ನೊಂದು ನೆರೆ ದೇಶವಾದ ಶ್ರೀಲಂಕಾದಲ್ಲಿ ಎಲ್.ಟಿ.ಟಿ.ಇ. ಸಂಘಟನೆ ಕಳೆದ ನಲವತ್ತು ವರ್ಷಗಳಿಂದ ಒಂದೇ ಸಮನೆ ಅಲ್ಲಿಯ ಸರ್ಕಾರದ ವಿರುದ್ಧ ಕಾಳಗ ನಡೆಸುತ್ತಿದೆ. ಆ ಸಂಘಟನೆಗೆ ಬೆಂಬಲವಾಗಿ ನಿಂತಿರುವಂಥವರು ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

ನಕ್ಸಲವಾದ, ಮವೋವಾದ, ಸಾಮ್ಯವಾದ ಮುಂತಾದ ಹಿಂಸಾಪ್ರೇಮಿ ವಾದಗಳು ಪ್ರಬಲವಾಗಿ ಬೆಳೆದದ್ದು ಗಣರಾಜ್ಯೋತ್ಸವದ ೫೬ನೇ ವರ್ಷದಲ್ಲಿಯ ಮುಖ್ಯ ಚಿಂತಾಕ್ರಾಂತ ವಿಷಯವಾಗಿದೆ.

ಕೇಂದ್ರ ಸರ್ಕಾರ ಉದ್ಯೋಗ ಭರವಸೆ ಯೋಜನೆ, ವಿದರ್ಭ ಮಾದರಿ ಸಹಾಯ, ಸಾಕ್ಷರತಾ ಆಂದೋಲನ ಮುಂತಾದ ಯೋಜನೆಗಳ ಮೂಲಕ ಮಂಜೂರು ಮಾಡುತ್ತಿರುವ ಅಪಾರವಾದ ಹಣ ಭ್ರಷ್ಟಾಚಾರದ ಕಾರಣದಿಂದ ಬದ್ಧತೆಯ ಅಭಾವದಿಂದ ಚರಂಡಿ ಮೂಲಕ ಅನ್ಯಾಯವಾಗಿ ಹರಿದು ಹೋಗುತ್ತಿದೆ.

ಕೋಮುವಾದ ಆಧಾರಿತ ಭಯೋತ್ಪಾದಕತೆ ಗಣರಾಜ್ಯದ ಅಸ್ತಿತ್ವಕ್ಕೆ ಸವಾಲಾಗಿ ಪರಿಣಮಿಸುತ್ತಿದೆ. ಗಣರಾಜ್ಯದ ಎಲ್ಲ ಪ್ರಮುಖ ರಾಜಕಾರಣಿ ನಾಯಕರು ಅತ್ಯಂತ ಭದ್ರ ಪೋಲಿಸ್ ರಕ್ಷಣೆಯಲ್ಲಿದ್ದಾರೆ. ಸ್ವಾತಂತ್ರೋತ್ಸವ, ಗಣರಾಜ್ಯೋತ್ಸವಗಳಂತೂ ಸೇನಾಪಡೆಯ ಕೋಟೆಯ ಮಧ್ಯ ನಡೆಯುತ್ತಿವೆ.

ಪಂಚಾಯತ್ ರಾಜ್ಯ ಆಡಳಿತ ವ್ಯವಸ್ಥೆಯಂತೂ ಕಾಲಕಳೆದಂತೆ ಹೊಲಸು ರಾಜಕೀಯದ, ಭ್ರಷ್ಟಾಚಾರದ, ಹಿಂಸಾಚಾರದ ಕೂಪವಾಗುತ್ತಿದೆ. ಆ ವ್ಯವಸ್ಥೆಯ ಆಶಯಗಳೆಲ್ಲವೂ ಮಣ್ಣುಪಾಲಾಗುತ್ತಿವೆ. ಪಂಚಾಯತ್‌ಗಳಿಗೆ ನಡೆಯುವ ಚುನಾವಣಾ ಕಾಲದಲ್ಲೂ ಬಿಗಿ ಪೋಲಿಸ್ ಬಂದೋಬಸ್ತ್ ಅಗತ್ಯವಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಪಂಚಾಯತ್ ಮೂಲಕ ಗ್ರಾಮಾಭಿವೃದ್ಧಿಗಾಗಿ ಹಣದ ಹೊಳೆಯನ್ನು ಹರಿಸುತ್ತಿದೆ. ಆದರೆ ಆ ಹಣದ ಹೊಳೆಯಲ್ಲಿ ಮಾನವೀಯ ಮೌಲ್ಯಗಳು ಕೊಚ್ಚಿಕೊಂಡು ಹೋಗುತ್ತಿವೆ. ಗ್ರಾಮಗಳಲ್ಲಿಯ ಜೀವನದಲ್ಲಿ ಆಧುನೀಕತೆಯ ಬಿರುಗಾಳಿ ಬೀಸುತ್ತಿರುವುದರಿಂದ ಗ್ರಾಮಜೀವನದ ಹಳೆ ಬಿಗಿ ತಪ್ಪಿದೆ, ಹೊಸ ಬಿಗಿ ಶಿಥಿಲವಾಗಿದೆ. ಆದ್ದರಿಂದ ಗ್ರಾಮದ ಜನ ಪ್ರವಾಹೋಪಾದಿಯಾಗಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಸಮಾಜದ ಜೀವನಾಡಿಯಾದ ವ್ಯವಸಾಯಕ್ಕೂ ಜನ ದೊರೆಯದೆ ಹೋಗುವ ಪರಿಸ್ಥಿತಿ ಉಂಟಾಗುತ್ತಿದೆ. ಸರ್ಕಾರದ ಯೋಜನೆಗಳಿಂದ ಗ್ರಾಮಗಳೂ ಹಾಳಾದವು, ನಗರಗಳೂ ಹಾಳಾದವು ಎಲ್ಲೆ ವಾಸಮಾಡಿದರೂ ಜನರಿಗೆ ಕಷ್ಟವಾಗುತ್ತಿದೆ.

ಹೊಸ ತಾಂತ್ರಿಕತೆ ಇಂಗ್ಲಿಷ್ ಭಾಷೆಗೆ ಮನ್ನಣೆ ಕೊಡುತ್ತಿರುವುದರಿಂದ ಗಣರಾಜ್ಯದ ಪ್ರಾಂತೀಯ ಭಾಷೆಗಳು ಸಾಯುವ ಸ್ಥಿತಿಗೆ ತಲುಪಿವೆ; ಸ್ಥಳೀಯ ಸಂಸ್ಕೃತಿ, ಕಲೆಗಳು, ಉದ್ಯೋಗಗಳು ನಾಶ ಹೊಂದುವ ಸ್ಥಿತಿಗೆ ತಲುಪಿವೆ. ಪ್ರಾಂತೀಯ ಭಾಷೆಗಳು, ಸ್ಥಳೀಯ ಸಂಸ್ಕೃತಿ ಹಾಳಾಗಿ ಹೋದರೆ ನಮ್ಮ ಗಣರಾಜ್ಯ ಭೂತ ಗಣರಾಜ್ಯವಾಗಿ ಪರಿಣಮಿಸುತ್ತದೆ. ಅಂಥಾ ಗಣರಾಜ್ಯದ ಕಲ್ಪನೆಯೇ ಭೀತಿ ಮೂಡಿಸುತ್ತಿದೆ. ಆದರೆ ಇದರ ಚಿಂತೆ ಗಣರಾಜ್ಯದ ಸೂತ್ರಧಾರಿಗಳಿಗೆ ಇಲ್ಲ. ಅವರಲ್ಲಿ ಕೆಲಸ ಮಾಡುತ್ತಿರುವ ಒಂದೇ ಒಂದು ವಿಚಾರ ಭಾರತವನ್ನು ಇನ್ನೊಂದು ಅಮೆರಿಕಾವನ್ನು ಮಾಡಬೇಕು. ಇನ್ನೊಂದು ಸಿಂಗಾಪುರವನ್ನು ಮಾಡಬೇಕು, ಇನ್ನೊಂದು ಜಪಾನನ್ನು ಮಾಡಬೇಕು. ಇದರ ಜೊತೆಗೆ ಏಷ್ಯಾದ ದೊಡ್ಡ ದೇಶವಾದ ಚೀಣಾದೊಂದಿಗೆ ಸ್ಪರ್ಧಿಸಿ ಅದನ್ನು ಹಿಂದಕ್ಕೆ ಹಾಕಬೇಕು. ಪಾಕಿಸ್ತಾನವನ್ನು ಮಣಿಸಬೇಕು. ಈ ವಿಚಾರ ಭಾರತೀಯ ಸಾಂಸ್ಕೃತಿಕ ವಿಚಾರಕ್ಕೆ ದೂರವಾದಂಥವು. ಇವೆಲ್ಲ ವಿಚಾರಗಳು ತನ್ನತನವನ್ನು ಕಳೆದುಹಾಕುವಂಥ ವಿಚಾರಗಳು. ಭಾರತದ ಗಣರಾಜ್ಯ ತನ್ನತನವನ್ನು ಉಳಿಸಿಕೊಂಡು ವಿಶಿಷ್ಟವಾಗಿ ಪ್ರಪಂಚಕ್ಕೆ ಮಾದರಿಯಾಗಬೇಕೆ ವಿನಃ

ಆಧುನಿಕತೆಯೆಂಬ ಭ್ರಮೆಯೊಳಗೆ ಸಿಕ್ಕು ಭ್ರಮಿಸಬಾರದು.

ಗಣರಾಜ್ಯೋತ್ಸವಕ್ಕೆ ಕುಂದು ತರುವಂಥ ನೀತಿಗಳಲ್ಲಿ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ ನೀತಿ. ಈ ನೀತಿ ಒಂದರ್ಥದಲ್ಲಿ ಭಾರತ ಗಣರಾಜ್ಯದ ವ್ಯವಸ್ಥೆಯನ್ನೇ ದುರ್ಬಲಗೊಳಿಸುವ ನೀತಿಯಾಗಿದೆ. ಬಡತನ, ನಿರುದ್ಯೋಗತನ, ಕಂಗಾಲತನ ಹೆಚ್ಚಿಸುತ್ತಾ
ಬಹು ಕಡಿಮೆ ಸಂಖ್ಯೆಯ ಜನರನ್ನು ಶ್ರೀಮಂತಗೊಳಿಸುವ ನೀತಿ ಇದಾಗಿದೆ.

ನಮ್ಮ ಗಣರಾಜ್ಯಕ್ಕೆ ಧಕ್ಕೆ ಒದಗಿಸುತ್ತಿರುವ ಬಹು ದೊಡ್ಡ ಸಮಸ್ಯೆಗಳೆಂದರೆ ಜನಸಂಖ್ಯಾ ಸ್ಫೋಟ ಹಾಗೂ ಕೋಮುವಾದ.

ಗಣರಾಜ್ಯವನ್ನು ಕುರಿತು ಗಂಭೀರವಾಗಿ ಆಲೋಚಿಸುವ ಕಾಲ ಬಂದಿದೆ. ತಂತ್ರಜ್ಞಾನ ಮತ್ತು ವಿಜ್ಞಾನ ಪ್ರಚುರಗೊಂಡಂತೆಲ್ಲ ಗಣರಾಜ್ಯಕ್ಕೆ ಹೊಸ ಭಾಷ್ಯ ಬರೆಯಬೇಕಾದ ಕಾಲ ಬಂದಿದೆ. ಅದು ಅತ್ಯಂತ ಮೂಲಭೂತವಾದುದು. ಆ ವಿಚಾರ ಕೇವಲ ಭಾರತ ದೇಶದ ಗಣರಾಜ್ಯ ಅಥವಾ ಸರ್ಕಾರಕ್ಕೆ ಸಂಬಂಧಿಸಿದುದಲ್ಲ. ಅದು ಜಗತ್ತಿನ ಎಲ್ಲ ಸರ್ಕಾರಗಳು, ಗಣರಾಜ್ಯಗಳಿಗೆ ಸಂಬಂಧಿಸಿದುದು.

ಯಾವ ರೀತಿ ಮನುಷ್ಯನ ಜೀವನಕ್ಕೆ ಮೋಕ್ಷ ಅಥವಾ ಮುಕ್ತಿ ಎಂಬುದು ಇರುತ್ತದೆಯೋ ಅದೇ ರೀತಿ ಸರ್ಕಾರಕ್ಕೂ ಮುಕ್ತಿ ಅಥವಾ ಮೋಕ್ಷ ಇರಲೇಬೇಕು. ಇದು ಪ್ರಕೃತಿ ನಿಯಮದ ಒಂದು ಭಾಗ. ಒಂದಾನೊಂದು ಭವಿಷ್ಯದಲ್ಲಿ ಈ ವಿಶ್ವವೇ ಇಲ್ಲವಾಗುತ್ತದೆಂದಾಗ ಸರ್ಕಾರಗಳು ಕೂಡ ಇಲ್ಲದಂತಾಗಬೇಕಾದುದು ಅನಿವಾರ್ಯ. ಪ್ರಾರಂಭದಲ್ಲಿ ಜೀವನವನ್ನು ಅತಿಯಾಗಿ ಪ್ರೀತಿಸುವ ಮನುಷ್ಯ ಕಾಲಕ್ರಮೇಣ ಆ ಜೀವನದ ಬಗ್ಗೆ ಜಿಗುಪ್ಸೆಗೊಂಡು ಅದರಿಂದ ಮುಕ್ತಿ ಪಡೆಯಲು ಬಯಸುವಂತೆ ಮನುಷ್ಯನು ಸರ್ಕಾರಗಳಿಂದಲೂ ಜಿಗುಪ್ಸೆ ಪಡೆಯುತ್ತಾನೆ.

ನಮ್ಮ ಭಾರತೀಯ ಸಂಸ್ಕೃತಿಯ ಪ್ರಕಾರ ನಮ್ಮ ಗಣರಾಜ್ಯವನ್ನು ಕಾಲಕ್ರಮೇಣ ವಿಸರ್ಜಿಸುವತ್ತ ಭಾರತೀಯರು ಆಲೋಚಿಸಬೇಕು ಹಾಗೂ ಕ್ರಿಯಾಶೀಲರಾಗಬೇಕು, ಈ ಕ್ರಿಯಾಶೀಲತೆಗೆ ಮೊದಲ ಹೆಜ್ಜೆಯಾಗಿ ಗ್ರಾಮರಾಜ್ಯ. ಕಾಲಕ್ರಮೇಣ ನಮ್ಮ ಇಂದಿನ ಗಣರಾಜ್ಯ ಗ್ರಾಮರಾಜ್ಯಕ್ಕೆ ದಾರಿಮಾಡಿಕೊಡಬೇಕು. ಓರ್ವ ಕವಿವಾಣಿಯ ಪ್ರಕಾರ ದೇವರು ಗ್ರಾಮವನ್ನು ಸೃಷ್ಟಿಸಿದ ಮಾನವ ನಗರವನ್ನು ಸೃಷ್ಟಿಸಿದ. ದೇವರು ಸೃಷ್ಟಿಸಿದ ಗ್ರಾಮರಾಜ್ಯವೇ ಮಾನವಕುಲಕ್ಕೆ ಕ್ಷೇಮಕರ. ಗ್ರಾಮರಾಜ್ಯದಲ್ಲಿ ಸ್ವಾವಲಂಬನೆ ಇರುತ್ತದೆ, ಪರಿಸರದ ರಕ್ಷಣೆ ಇರುತ್ತದೆ, ಭ್ರಾತೃತ್ವ ಇರುತ್ತದೆ, ಮಾನವ ಸಂಸ್ಕೃತಿ ಇರುತ್ತದೆ. ಅಲ್ಲಿ ಭಗವಂತನ ರಾಜ್ಯ ಇರುತ್ತದೆ. ಆದ್ದರಿಂದ ಇಂದಿನ ಭಯಾನಕ ಗಣರಾಜ್ಯದ ಬದಲಾಗಿ ಗೋಕುಲಗಳಂಥ ಗ್ರಾಮರಾಜ್ಯವನ್ನು ಸ್ಥಾಪಿಸುವುದು ಮೇಲು.

* * *

ಕನ್ನಡಕ್ಕೆ ಸಾರ್ವಭೌಮ ಸ್ಥಾನ ದಕ್ಕಬೇಕು

– *ಪ್ರೊ. ಎಲ್.ಎಸ್. ಶೇಷಗಿರಿರಾವ್*

(ಉಡುಪಿಯಲ್ಲಿ ನಡೆದ ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ)

ಕನ್ನಡ ಸಾಹಿತ್ಯ ಪರಿಷತ್ತಿನ ಬಂಧುಗಳು ಮತ್ತು ಈ ಸಮ್ಮೇಳನದ ಸ್ವಾಗತಸಮಿತಿಯ ಬಂಧುಗಳು ನನ್ನನ್ನು ಸಮ್ಮೇಳನಾಧ್ಯಕ್ಷನೆಂದು ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ. ಆದರೆ ನಾನು ಕನ್ನಡಕಾರ್ಯಕರ್ತನಾಗಿ ಬರುತ್ತಿದ್ದೇನೆ. ಈ ಗಳಿಗೆಯಲ್ಲಿ ನನ್ನ ಕಣ್ಣ ಮುಂದೆ ಕನ್ನಡದ ಪ್ರೀತಿ, ಅಭಿಮಾನಗಳು ತುಂಬಿ ತುಳುಕುತ್ತಿರುವ ಸಹಸ್ರಾರು ಮಂದಿ ಕನ್ನಡ ಬಂಧುಗಳಿದ್ದಾರೆ. ಇವರೊಂದಿಗೆ ಕನ್ನಡಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡಿದ ಇನ್ನೂ ಸಹಸ್ರಾರು ಮಂದಿ ಕಾರ್ಯಕರ್ತರಿದ್ದಾರೆ. ಕನ್ನಡ ನಾಡಿನ ಏಕೀಕರಣಕ್ಕಾಗಿ ನಾಡಿನ ಎಲ್ಲ ಭಾಗಗಳಲ್ಲಿ ಶ್ರಮಿಸಿದ, ಹೋರಾಡಿದ ನುಡಿಭಕ್ತರು, ಬೇರೆ ಬೇರೆ ಕಾಲಗಳಲ್ಲಿ ಚಳವಳಿಗಳಲ್ಲಿ ಭಾಗವಹಿಸಿದ ಕನ್ನಡ ಕಾರ್ಯಕರ್ತರು ನನ್ನ ಮನಸ್ಸಿನ ಕಣ್ಣ ಮುಂದೆ ಇದ್ದಾರೆ. ಸುಳ್ಳು ಆಪಾದನೆಗಳ ಮೇಲೆ ಬಂಧಿತರಾದ ಕಾರ್ಯಕರ್ತರ ನೆರವಿಗೆ ಹೋಗಲು ರಿಕ್ಷಾಗೆ ಕೊಡಲು ಹಣವಿಲ್ಲದೆ ನಡೆದೇ ಹೋದ ಮ. ರಾಮಮೂರ್ತಿಯವರು, ಅವರ ಜೊತೆಗಾರರು, ರೈಲು ತಡೆ ಕಾರ್ಯಕ್ರಮದಲ್ಲಿ ರೈಲಿಗೆ ಸಿಕ್ಕು ಗಾಯಗೊಂಡ ಕಾರ್ಯಕರ್ತರು ಮತ್ತು ರೈಲಿಗೆ ಸಿಕ್ಕಿ ಪ್ರಾಣಕೊಟ್ಟ ಗೋವಿಂದರಾಜು ಇಂಥ ಕಾರ್ಯಕರ್ತರು ನನ್ನ ಕಣ್ಣ ಮುಂದಿದ್ದಾರೆ. ಬೆಂಗಳೂರಿನ ದೂರದರ್ಶನದಲ್ಲಿ ಕನ್ನಡಕ್ಕೆ ಗೌರವ ಸ್ಥಾನಕ್ಕಾಗಿ, ಇಡೀ ರಾಷ್ಟ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ದೂರದರ್ಶನ ಕೇಂದ್ರವನ್ನು ವಶಮಾಡಿಕೊಂಡು ಪ್ರಧಾನಿ ಇಂದಿರಾಗಾಂಧಿಯ ಸ್ವಾತಂತ್ರ್ಯ ದಿನದ ಭಾಷಣವನ್ನು, ರಾಮಾಯಣದ ಪ್ರಸಾರವನ್ನು , ತೀವ್ರ ಶಿಕ್ಷೆಯ ಅಪಾಯವನ್ನು ಎದುರಿಸಿ ತಡೆದ ಕಾರ್ಯಕರ್ತರು ನನ್ನ ಕಣ್ಣ ಮುಂದೆ ಇದ್ದಾರೆ. ಪೊಲೀಸರು ಬಂಧಿಸಿ ರಾತ್ರಿ ಊರಿನಾಚೆ ಕಾಡಿನಲ್ಲಿ ಬಿಟ್ಟಾಗ ಹೇಗೋ ಊರಿಗೆ ಬಂದು ಸೇರಿದ ಕಾರ್ಯಕರ್ತರಿದ್ದಾರೆ. ಕಚೇರಿ– ಕಾರ್ಖಾನೆಗಳಿಗೆ ರಜೆ ಹಾಕಿ ಧರಣಿ, ಮೆರವಣಿಗೆ ಮತ್ತು ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕಾರ್ಯಕರ್ತರಿದ್ದಾರೆ. ಮೊಕದ್ದಮೆಗಳನ್ನು ಎದುರಿಸಿ ತಿಂಗಳುಗಟ್ಟಲೆ ನ್ಯಾಯಾಲಯಕ್ಕೆ ಅಲೆದ ಕಾರ್ಯಕರ್ತರಿದ್ದಾರೆ. ಎಲ್ಲ ಕಾಲಗಳಲ್ಲಿ ಕನ್ನಡ ನಾಡು–ನುಡಿಯ ಪರವಾದ ಹೋರಾಟದಲ್ಲಿ ಭಾಗವಹಿಸಿದ, ವಹಿಸುತ್ತಿರುವ ಎಲ್ಲ ಕಾರ್ಯಕರ್ತರಿಗೆ ನನ್ನ ಅಭಿಮಾನಪೂರ್ವಕವಾದ ನಮನಗಳು. ಕನ್ನಡ ನಾಡು–ನುಡಿಗಳ ಪರವಾದ ಎಲ್ಲ ಕೆಲಸಗಳಲ್ಲಿ ಪ್ರೀತಿಯಿಂದ ದುಡಿಯುವ ಈ ಕಾರ್ಯಕರ್ತರು ಹಾರಗಳನ್ನು ಹಾಕಿಸಿಕೊಳ್ಳುವುದಿಲ್ಲ. ವೇದಿಕೆಗಳಿಂದ ಭಾಷಣ ಮಾಡುವುದಿಲ್ಲ. ಇಡೀ ಕಟ್ಟಡದ ಭಾರವನ್ನು ಹೊತ್ತು ಯಾರಿಗೂ ಕಾಣದೆ ನೆಲದಲ್ಲಿ ಅಸ್ತಿಭಾರವು ಮರೆಯಾದಂತೆ ಮರೆಯಲ್ಲಿರುವ ಈ ಕಾರ್ಯಕರ್ತರು ನಮ್ಮ ಎಲ್ಲ ಸಾಧನೆಗಳ ಅಸ್ತಿಭಾರ. ಇವರಿಗೆ ಕನ್ನಡ ನಾಡಿನ ಪರವಾಗಿ ಕೃತಜ್ಞತೆಯ ನಮನಗಳು.

ನಾನು ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ ಒಂದಿಷ್ಟು ಕೆಲಸ ಮಾಡಿದ್ದೆ ಅದು

ಮಹತ್ವದ ಸಂಗತಿಯಲ್ಲ. ಹಾಗೆ ಕೆಲಸ ಮಾಡದಿದ್ದರೆ ತಪ್ಪಾಗುತ್ತಿತ್ತು. ಅ.ನ. ಕೃಷ್ಣರಾಯರು ಒಂದು ಸಂದರ್ಭದಲ್ಲಿ ಹೇಳಿದಂತೆ, "ಕನ್ನಡಕ್ಕೆ ನನ್ನಂತಹವರು ಸಾವಿರ ಮಂದಿ ಇದ್ದಾರೆ. ನನಗಿರುವುದು ಒಂದೇ ತಾಯ್ನುಡಿ, ಕನ್ನಡ" ನಾನು ನಲವತ್ತೊಂದು ವರ್ಷ ಇಂಗ್ಲಿಷ್ ಪಾಠ ಹೇಳಿದ್ದರೂ ಇಂದು ಕಾಲಿಗೆ ಮುಳ್ಳು ಚುಚ್ಚಿದರೆ 'ಅಯ್ಯೋ' ಎನ್ನುತ್ತೇನೆ, 'ಅಲಾಸ್' ಎನ್ನುವುದಿಲ್ಲ. ದಿಗ್ಭ್ರಾಂತನಾದಾಗ ಥಟ್ಟನೆ ನೆನಪಿಗೆ ಬರುವುದು 'ಲೀಡ್, ಕೈನ್ಡ್ಲೀ ಲೈಟ್' ಅಲ್ಲ. 'ಕರುಣಾಳು ಬಾ ಬೆಳಕೆ'. ನಾನು ಮಾಡಿರುವ ಒಂದಿಷ್ಟು ಕೆಲಸವನ್ನು ಔದಾರ್ಯದಿಂದ ಕಂಡು ನನ್ನನ್ನು ಈ ಪೀಠಕ್ಕೆ ತಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಪ್ರೊ. ಚಂದ್ರಶೇಖರ ಪಾಟೀಲರಿಗೂ, ಕಾರ್ಯಕಾರಿ ಸಮಿತಿಗೂ, ಎಲ್ಲ ಕನ್ನಡಿಗರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಕೃಷ್ಣನ ಪವಿತ್ರ ಕ್ಷೇತ್ರವಾದ ಉಡುಪಿಯಲ್ಲಿ ಸಮ್ಮೇಳನಾಧ್ಯಕ್ಷನಾಗಿರುವುದು ನನ್ನ ಭಾಗ್ಯ ಎಂದುಕೊಂಡಿದ್ದೇನೆ. ಇಲ್ಲಿ ಶ್ರೀ ಕೃಷ್ಣನ ಸೇವೆಗೆ ಮುಡಿಪಾದ ಅಷ್ಟ ಮಠಗಳಿವೆ. ಇದು, ದಾಸ ಶ್ರೇಷ್ಠರಾದ ಕನಕದಾಸರು ಭಕ್ತಿಯ ಮಂಗಳಕರ ಶಕ್ತಿಯನ್ನು ತೋರಿಸಿಕೊಟ್ಟ ಪುಣ್ಯ ಕ್ಷೇತ್ರ, ಶಿಕ್ಷಣದ ಅಭಿವೃದ್ಧಿಗೆ ರಾಜ್ಯದಲ್ಲಿ ಪ್ರಥಮ ಪಂಕ್ತಿಯಲ್ಲಿರುವ ಜಿಲ್ಲೆ ಉಡುಪಿ. ಶೇಕಡಾ ೭೫ರಷ್ಟು ಮಂದಿ ಅಕ್ಷರಸ್ಥರಾಗಿರುವ ಈ ಪ್ರದೇಶವು ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳ ತವರಾಗಿದೆ. ಸಾಹಿತ್ಯ ಮತ್ತು ಎಲ್ಲ ಕಲೆಗಳ ತವರೂರು ಈ ಪ್ರದೇಶ. ಶ್ರಮಜೀವಿಗಳೂ, ಬುದ್ಧಿವಂತರೂ, ಸಾಹಸ ಪ್ರವೃತ್ತಿಯವರೂ ಆದ ಈ ಪ್ರದೇಶದ ನನ್ನ ಬಂಧುಗಳು ಬ್ಯಾಂಕಿಂಗ್, ವ್ಯವಹಾರ ಮತ್ತು ಉದ್ಯಮಗಳಲ್ಲಿ ತಾವು ಬೆಳೆದು ನಾಡನ್ನೂ ಬೆಳೆಸಿದ್ದಾರೆ. ದೈವಾನುಗ್ರಹ, ಪ್ರಾಮಾಣಿಕ ಶ್ರಮ, ವಿದ್ಯೆ, ಸಾಹಸ ಮತ್ತು ಸೌಜನ್ಯಗಳ ಸಂಗಮವಾದ ಉಡುಪಿಯಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗುವುದು 'ಇದು ಭಾಗ್ಯ, ಇದು ಭಾಗ್ಯ'.

ಇಂದು ಈ ವೇದಿಕೆಯ ಮೇಲೆ ನಿಂತಾಗ ನನ್ನ ಮನಸ್ಸು ಸಮ್ಮೇಳನಾಧ್ಯಕ್ಷರಾಗಿ ಈ ಪೀಠಕ್ಕೆ ಗೌರವವನ್ನು ತಂದ ಹಿರಿಯರತ್ತ ತಿರುಗುತ್ತದೆ. ಅವರಲ್ಲಿ ಹಲವರ ವಿದ್ಯಾರ್ಥಿಯಾಗಿದ್ದ ಭಾಗ್ಯ ನನ್ನದು. ಆಚಾರ್ಯ ಶ್ರೀ ಅವರು, ಎಸ್.ವಿ. ರಂಗಣ್ಣನವರು, ವಿ.ಸೀ.ಅವರು, ಕುವೆಂಪು ಅವರು, ರಾಜರತ್ನಂ ಅವರು, ವಿ.ಕೃ ಗೋಕಾಕರು ನನ್ನ ಗುರುಗಳು. ಕೆಲವರು ನನ್ನ ಓರಿಗೆಯವರು, ಗೆಳೆಯರು, ಆತ್ಮೀಯರು; ಅವರನ್ನೆಲ್ಲ ಗೌರವದಿಂದ, ಆದರದಿಂದ ಸ್ಮರಿಸುತ್ತೇನೆ. ನಾನು ಇಂದು ಈ ಗೌರವಸ್ಥಾನಕ್ಕೆ ಪಾತ್ರನಾಗುವುದಕ್ಕೆ ಕಾರಣರಾದ ಎಲ್ಲ ಗುರುಗಳಿಗೆ, ಗುರು ಸಮಾನರಿಗೆ ನನ್ನ ನಮನಗಳು. ನನ್ನ ಸಾಹಿತ್ಯ ಪ್ರೀತಿಯನ್ನು ಬೆಳೆಸಿದ ತಂದೆ ತಾಯಿಯರಿಗೆ ಭಕ್ತಿಪೂರ್ವಕ ನಮನಗಳು.

ನಾಡಿನ ಹಿರಿಯರನ್ನು ಸ್ಮರಿಸುವ ಈ ಗಳಿಗೆಯಲ್ಲಿ ಒಂದು ಮಾತನ್ನು ಬಿನ್ನವಿಸಬೇಕು. ಇಬ್ಬರು ಹಿರಿಯರ ಜನ್ಮ ಶತಮಾನೋತ್ಸವ, ಇಬ್ಬರ ಜನ್ಮ ಶತಮಾನ ವರ್ಷದ ಪ್ರಾರಂಭ ೨೦೦೮ರಲ್ಲಿ ನಮ್ಮನ್ನು ಬೆಳಗಲಿವೆ. ಅ.ನ.ಕೃ. ಅವರ ಜನ್ಮ ಶತಮಾನೋತ್ಸವ ೨೦೦೮ರ ಮೇ ತಿಂಗಳಲ್ಲಿ, ಜಿ.ಪಿ. ರಾಜರತ್ನಂ ಅವರ ಜನ್ಮ ಶತಮಾನೋತ್ಸವ ಡಿಸೆಂಬರ್ ತಿಂಗಳಲ್ಲಿ, ವಿ.ಕೃ. ಗೋಕಾಕರು ಹುಟ್ಟಿದ್ದು ೧೯೦೯ರ ಆಗಸ್ಟ್ ೯ರಂದು, ದಿನಕರ

ದೇಸಾಯಿಯವರು ಹುಟ್ಟಿದ್ದು ೧೯೦೯ರ ಸೆಪ್ಟೆಂಬರ್ ೧೧ರಂದು. ಈ ಎಲ್ಲ ಹಿರಿಯರನ್ನು ಅತ್ಯಂತ ಗೌರವದಿಂದ ಸ್ಮರಿಸುತ್ತಲೇ ಅ.ನ.ಕೃ. ಎಂದೇ ಪ್ರಸಿದ್ಧರಾದ ಅ.ನ. ಕೃಷ್ಣರಾಯರ ವಿಷಯ ವೈಯಕ್ತಿಕವಾಗಿ ಒಂದು ಮಾತನ್ನು ಹೇಳಬೇಕು. ಆಚಾರ್ಯ ಬಿ.ಎಂ.ಶ್ರೀ ಅವರಿಂದ ಕರ್ನಾಟಕದ ಪುನಃಶ್ಚೇತನಕ್ಕೆ ಒಂದು ಸಾಂಸ್ಕೃತಿಕ ಚಳವಳಿ ಪ್ರಾರಂಭವಾಯಿತು. ಆ ಮನೋಧರ್ಮದಲ್ಲಿ ಕನ್ನಡದ ಕೆಲಸವನ್ನು ಪ್ರಾರಂಭಿಸಿದವರು ನಾನು ಮತ್ತು ನನ್ನಂತಹ ಹಲವರು ವಿದ್ಯಾವಂತ ತರುಣರು. ಆದರೆ ಕನ್ನಡಕ್ಕಾಗಿ ಬೀದಿಗೆ ಇಳಿದು ಘನತೆಯಿಂದ, ಗೌರವದಿಂದ ಚಳವಳಿ ಮಾಡುವುದು ವಿದ್ಯಾವಂತರಿಗೆ ಅಪಮಾನವಲ್ಲ ಎಂದು ತೋರಿಸಿಕೊಟ್ಟು ನಮ್ಮನ್ನು ಕನ್ನಡದ ಕಾರ್ಯಕರ್ತರನ್ನಾಗಿ ರೂಪಿಸಿದವರು ಅ.ನ.ಕೃ. ಕನ್ನಡ ಜನತೆ ಈ ಎಲ್ಲ ಹಿರಿಯರ ಸಾಹಿತ್ಯ ಮತ್ತು ಚಿಂತನೆಯನ್ನು ಮತ್ತೆ ಅಧ್ಯಯನ ಮಾಡಿ ಇವರ ಜನ್ಮ ದಿನಗಳನ್ನು ಗೌರವದಿಂದ, ಕೃತಜ್ಞತೆಯಿಂದ ಆಚರಿಸುತ್ತದೆ. ಕರ್ನಾಟಕ ಸರ್ಕಾರವೂ ಈ ಉಜ್ವಲ ಭಾಗ್ಯನಿಧಿಗಳಿಗೆ ಅವರ ಹಿರಿಮೆ, ನಮ್ಮ ಪ್ರೀತಿ ಕೃತಜ್ಞತೆಗಳಿಗೆ ಉಚಿತವಾದ ರೀತಿಯಲ್ಲಿ ನಮನವನ್ನು ಸಲ್ಲಿಸುತ್ತದೆ ಎಂಬ ವಿಶ್ವಾಸ ನನಗಿದೆ.

ನನ್ನ ವಿಷಯವಾಗಿ ನಾನು ಹೆಚ್ಚು ಮಾತನಾಡಲು ಬಯಸುವುದಿಲ್ಲ. ಆದರೆ ನನ್ನ ಬದುಕಿನುದ್ದಕ್ಕೂ ನನ್ನಲ್ಲಿ ಮೂಡಿಬಂದಿರುವ ಮನೋಧರ್ಮವನ್ನು ಸಂಗ್ರಹವಾಗಿ ತಮ್ಮ ಮುಂದಿಡಲು ಬಯಸುತ್ತೇನೆ. ಈ ವಿವರಣೆಯನ್ನು ಇಪ್ಪತ್ತೊಂದು ವರ್ಷಗಳ ಹಿಂದೆ 'ತುಷಾರ' ಮಾಸ ಪತ್ರಿಕೆಯಲ್ಲಿ ಮತ್ತು ಆಕಾಶವಾಣಿಗಾಗಿ ಬರೆದೆ.

"ಈ ಸೂರ್ಯ, ಈ ಚಂದ್ರ, ಈ ಹಿಮಾಲಯ, ಈ ಅಟ್ಲಾಂಟಿಕ್, ಈ ಸಿಡಿಲು, ಈ ಭೂಕಂಪ ಎಲ್ಲದರ ಮಧ್ಯೆ ನಾನು (ಎಂದರೆ ಮನುಷ್ಯ) ಎಷ್ಟರವನು! ಆದರೆ ಈ ಸೂರ್ಯ, ಈ ಚಂದ್ರ.... ಎಲ್ಲಕ್ಕೆ ಅರ್ಥ ಬರುವುದು ನನ್ನಿಂದ (ಎಂದರೆ ಮನುಷ್ಯನಿಂದ) ನಾನಿಲ್ಲದಿದ್ದರೆ ಈ ಸೂರ್ಯನನ್ನು ನೋಡಿ ಬೆರಗಾಗುವವರು, ಈ ಚಂದ್ರನನ್ನು ನೋಡಿ ಮನಸೋಲುವವರು, ಈ ಹಿಮಾಲಯಕ್ಕೆ ಗೌರವದಿಂದ ತಲೆಬಾಗುವವರು ಯಾರು?

ವಿಶ್ವದಲ್ಲಿ ನಾನೆಷ್ಟು ಅಮುಖ್ಯ, ವಿಶ್ವದಲ್ಲಿ ನಾನೆಷ್ಟು ಮುಖ್ಯ ಈ ಅರಿವುಗಳ ತುಯ್ತ ನನ್ನಲ್ಲಿರುವಾಗ ನಾನು ನಿಜವಾಗಿ ಜೀವಂತನಾಗಿರುತ್ತೇನೆ. ಪ್ರತಿಷ್ಠೆಗಾಗಿ, ಹಣಕ್ಕಾಗಿ ಶ್ರಮಿಸುವ ಕಾಲದಲ್ಲಿ ನನಗೆ ನಾನೇ ಮೋಸಮಾಡಿಕೊಳ್ಳುತ್ತಿದ್ದೇನೆ. ಬಾಳಿರುವುದೇ ಪ್ರತಿಷ್ಠೆಯನ್ನು ಪಡೆಯಲಿಕ್ಕೆ, ಹಣಗಳಿಸಲಿಕ್ಕೆ ಎಂಬ ಭ್ರಾಂತಿಗಳಿಲ್ಲದೆ ನಾನು ಕಳೆಯುವ ಕಾಲದಲ್ಲೆ ನಾನು ನಿಜವಾಗಿ, ಸಾರ್ಥಕವಾಗಿ ಬದುಕಲು ಸಾಧ್ಯ. ಇಂಥ ಕಾಲದಲ್ಲಿ ನಾನು ನಾನಾಗಿ, ವ್ಯಕ್ತಿಯಾಗಿ ಇದ್ದೂ ಸಮಸ್ತ ಬಾಳಿನ ಭಾಗವಾಗಿರಲು ಸಾಧ್ಯ. ಇದನ್ನು ಸಾಧಿಸಲು ನನಗಿರುವ ಸಾಧನಗಳಲ್ಲಿ ಸಾಹಿತ್ಯ ಒಂದು. 'ನನ್ನಿಂ'ದ ನಾನು ತಪ್ಪಿಸಿಕೊಂಡೂ ನಾನಾಗಿ ಉಳಿಯುವುದನ್ನು ಸಾಹಿತ್ಯ ಸಾಧ್ಯ ಮಾಡುತ್ತದೆ.

"ಇದು ನನ್ನ ಬದುಕು. ನೂರಾರು ಮಂದಿ ಪ್ರತಿಭಾವಂತ ವಿಜ್ಞಾನಿಗಳು ಬಿಡಿಸಿ ಬಗೆದು ನೋಡುತ್ತಿದ್ದರೂ ತನ್ನ ಸ್ವರೂಪವನ್ನು ಬಿಟ್ಟುಕೊಡದ ಸೃಷ್ಟಿಯ ವಿಷಯ ತಿಳಿದುಕೊಳ್ಳಲು ಒಂದು ಅವಕಾಶ. ದುಃಖ ನೋವುಗಳಲ್ಲಿರುವವರಿಗೆ ನನ್ನ

ಕೈಯಲ್ಲಾದುದನ್ನು ಮಾಡುವ, ಏನೂ ಆಗದಿದ್ದಾಗ 'ಅಯ್ಯೋ' ಎಂದು ಮರುಗುವ ಅವಕಾಶ. ಒಂದು ರೀತಿಯಲ್ಲಿ ಬದುಕು ಒಂದು ಬಗೆಯ 'ಟಗ್ ಆಫ್ ವಾರ್'. ನನ್ನೊಳಗಿನ ಸಣ್ಣತನ, ಕ್ರೌರ್ಯ, ಅಜ್ಞಾನ ಒಂದು ಕಡೆ, ನನ್ನ ಹೊರಗೆ ಕಾಣುವ, ನನ್ನನ್ನು ಕರೆಯುವ ದೊಡ್ಡತನ, ಜ್ಞಾನ, ಕರುಣೆ ಇವುಗಳು ಇನ್ನೊಂದು ಕಡೆ. ಇವುಗಳ ನಡುವೆ ಸೆಣೆಸಾಟ. ಮತ್ತೊಂದು ರೀತಿಯಲ್ಲಿ ಬದುಕು, ನಿಗೂಢಗಳೂ ಅಪಾಯಗಳೂ ತುಂಬಿದ ಕಾಡಿನಲ್ಲಿ ಒಂದು ಪಾತ್ರೆಯನ್ನು ಹಿಡಿದು ಪಯಣ. ಆ ನಿಗೂಢಗಳನ್ನಾಗಲೀ, ಅಪಾಯಗಳನ್ನಾಗಲೀ, ನೋವನ್ನಾಗಲೀ ಮರೆಯುವುದು ಸಾಧ್ಯವೇ ಇಲ್ಲ. ಆದರೂ, ೬೦ ವರ್ಷ-೭೦ ವರ್ಷ ಪಯಣ ಸಾಗಿದಮೇಲೆ ಬದುಕಾಗಲೀ ಸಾವಾಗಲೀ, "ನಿನ್ನ ಪಾತ್ರೆಯಲ್ಲಿ ಏನು ತುಂಬಿಕೊಂಡೆ?" ಎಂದು ಕೇಳಿದರೆ "ಕಹಿ ನೆನಪುಗಳನ್ನು, ದೂರುಗಳನ್ನು, ನನ್ನ ಗೋಳುಗಳನ್ನು ತುಂಬಿಕೊಂಡೆ" ಎಂದು ಉತ್ತರ ಹೇಳುವಂತಾಗಬಾರದು. ಒಂದಿಷ್ಟು ತಿಳುವಳಿಕೆ, ಒಂದಿಷ್ಟು ಉಲ್ಲಾಸ, ಒಂದಿಷ್ಟು ಇತರರಿಗಾಗಿ ಮರುಗಿದ ಅನುಭವ, ಒಂದಿಷ್ಟು ಬೆಳಕು ನನ್ನ ಈ ಪಾತ್ರೆಯಲ್ಲಿವೆ ಎನ್ನಲು ಸಾಧ್ಯವಾಗಬೇಕು. ಅನ್ಯಾಯ, ನಿಗೂಢತೆಗಳ ನೆರಳಿನಲ್ಲಿ ಇರುವ ಬದುಕು ಸಹ ಒಂದು ಅವಕಾಶ, ಒಂದು ಆಹ್ವಾನ. ಈ ನೆರಳಿನಲ್ಲಿಯೂ ತಿಳುವಳಿಕೆ, ಕ್ಷೇಮ, ವಿಶ್ವಾಸ, ಸಹಾನುಭೂತಿಗಳಿವೆ. ಅದರಿಂದಲೇ ಬದುಕು ಒಂದು ಅವಕಾಶವಾದಂತೆ, ಬದುಕು ಪಾವನವೂ ಹೌದು. ಅಮೂಲ್ಯವೂ ಹೌದು.

ಹೀಗೆ ಹೇಳುವಾಗ ನಾನು ಸಾಹಿತ್ಯದ ಸಾಮಾಜಿಕ ಹೊಣೆಯನ್ನು ಕಡೆಗಣಿಸುತ್ತಿಲ್ಲ. ಸಾಹಿತ್ಯದ ಯಾವ ವಿದ್ಯಾರ್ಥಿಯೂ ಇದನ್ನು ಕಡೆಗಣಿಸುವಂತಿಲ್ಲ. ಏಕೆಂದರೆ, ಸಾಹಿತ್ಯದ ಮಾಧ್ಯಮವೇ ಭಾಷೆ. ಭಾಷೆ ಸಮಾಜದಲ್ಲಿಯೇ ಹುಟ್ಟಿದ್ದು...ಅಲ್ಲದೆ ಬರೆಯುವುದು ಇತರರನ್ನು ಮುಟ್ಟಲಿ ಎಂದು. ಆ 'ಇತರರು' ಯಾರು? ಸಾರ್ತ್ರೆ ಹೇಳಿದ, "ನೀವು ಯಾರಿಗಾಗಿ ಬರೆಯುತ್ತೀರಿ? ಗುಲಾಮರಿಗಾಗಿ ಬರೆಯಲಾಗದು". ಅಲ್ಲದೆ, ಇನ್ನೊಬ್ಬರ ಮನಸ್ಸಿನಲ್ಲಿ ನಾನಿರಿಸಬಯಸುವುದರ ಸ್ವರೂಪ ಎಂಥದು? ಎಷ್ಟು ಆರೋಗ್ಯಕರ? ಇವೆಲ್ಲ ಪ್ರಶ್ನೆಗಳು ಬರಹಗಾರನಾಗಿ ನನ್ನ ಮುಂದಿವೆ. ಅದರಿಂದಲೇ ಭಾಷಾ ಶಾಸ್ತ್ರಜ್ಞ ಚೋಮ್‌ಸ್ಕಿ ಹೇಳಿದ್ದು; 'ಬರೆಯುವುದು ಒಂದು ಸಾಮಾಜಿಕ ಕ್ರಿಯೆ'.

"ಇದೆಲ್ಲವನ್ನೂ ನೆನಪಿಟ್ಟೂ ನನಗೆ ಎನ್ನಿಸುತ್ತದೆ, 'ನನ್ನಿಂ'ದ ನಾನು ತಪ್ಪಿಸಿಕೊಂಡು ನಾನಾಗಿ ಉಳಿಯುವುದನ್ನು ಸಾಧ್ಯವನ್ನಾಗಿ ಮಾಡುವುದರಿಂದ ಸಾಹಿತ್ಯ ನನಗೆ ಮುಖ್ಯ. ಏಕೆಂದರೆ ಈ ಸ್ಥಿತಿಯನ್ನು ನಾನು ಮುಟ್ಟಿದಾಗ, ನನ್ನ ಸಂವೇದನೆಗಳು ಸೂಕ್ಷ್ಮಗೊಂಡಾಗ ಸಾಮಾಜಿಕ ಅನ್ಯಾಯ ಅಸಮಾನತೆಗಳಿಗೆ ನಾನು ಕಣ್ಮುಚ್ಚಿರಲಾರೆ. ಮಾಸ್ತಿಯವರ 'ಮಂತ್ರೋದಯ', ದೇವನೂರು ಮಹಾದೇವರ 'ಅಮಾಸೆ', ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ', ಕುಂ.ವೀರಭದ್ರಪ್ಪನವರ 'ದೇವರ ಹೆಣ' ಎಲ್ಲವೂ ನನ್ನನ್ನು ಬೆಳೆಸುತ್ತವೆ."

"ನೀನು ಹೀಗೆಯೇ ಪ್ರತಿಕ್ರಿಯೆ ತೋರಿಸಬೇಕು ಎಂದು ಹೇಳುವ ಧರ್ಮವಾಗಲಿ, ಪಂಥವಾಗಲಿ ನನ್ನ ವ್ಯಕ್ತಿತ್ವವನ್ನು ಸಂವೇದನೆಗಳನ್ನು ಬೆಳೆಸಲಾರದು. ವೈಯಕ್ತಿಕ ಜೀವನ, ಸಾಮಾಜಿಕ ಜೀವನ ಅಥವಾ ಒಟ್ಟಿನಲ್ಲಿ ಜೀವನ ಇವುಗಳಲ್ಲಿ ಯಾವುದರಲ್ಲಿಯೇ ಆಗಲಿ

ಹೊರ ರೂಪವನ್ನು ದಾಟಿ ವಾಸ್ತವಿಕತೆಯನ್ನು ನನ್ನ ಅನುಭವಕ್ಕೆ ತಂದುಕೊಡುವ ಕೃತಿ ನನ್ನನ್ನು ಬೆಳೆಸಿತು. ಮಾನಸಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಯುತ್ತಲೇ ಹೋಗಬೇಕೆಂದು ಬಯಸುವ ಚೇತನವನ್ನು ಬೆಳೆಸಬಲ್ಲ ಶಬ್ದರಚನೆ ಶ್ರೇಷ್ಠ ಸಾಹಿತ್ಯ"

ಈವರೆಗೆ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕಾದಂಬರಿಕಾರರು, ಕವಿಗಳು, ಸಣ್ಣ ಕಥೆಗಳ ಬರಹಗಾರರು, ನಾಟಕಕಾರರು, ಪ್ರಬಂಧಕಾರರು ಅಲ್ಲದೆ ಮಹಾನ್ ವಿದ್ವಾಂಸರನ್ನು ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರನ್ನಾಗಿ ಆರಿಸಿ ನಾಡು ಗೌರವಿಸಿದೆ. ಮೊದಲಬಾರಿಗೆ ವಿಮರ್ಶಕನೆಂದೇ ಗುರುತಿಸಲಾಗುವ ಸಾಹಿತಿಯನ್ನು ಈ ಪೀಠಕ್ಕೆ ನಾಡು ಆರಿಸಿದೆ. ಸಾಹಿತ್ಯ, ವಿಮರ್ಶೆಗಳನ್ನು ಕುರಿತು ಕೆಲವು ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಅದಕ್ಕೆ ಮೊದಲು ಒಂದು ಮಾತನ್ನು ನಿವೇದಿಸಬೇಕು. ನಾನು ಸಾಹಿತ್ಯವನ್ನು ಪ್ರವೇಶಿಸಿದ್ದು ಸಣ್ಣ ಕಥೆಗಳ ಬರಹಗಾರನಾಗಿ. ೧೯೪೭೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಅಖಿಲ ಕರ್ನಾಟಕ ಸಣ್ಣ ಕಥೆಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದೆ. ನನ್ನ ನಾಲ್ಕು ಕಥೆಗಳ ಸಂಗ್ರಹಗಳು ಪ್ರಕಟವಾಗಿವೆ.

ಸಾಹಿತ್ಯವು ನನ್ನನ್ನು ಮೊದಲು ಆಕರ್ಷಿಸಿದ್ದು ಅದು ತಂದುಕೊಡಬಲ್ಲ ಅನುಭವಗಳ ವೈವಿಧ್ಯ ಮತ್ತು ಶ್ರೀಮಂತಿಕೆಯಿಂದ, ಕೆ.ವಿ. ಅಯ್ಯರ್ ಅವರ ಮಹಾನ್ ಚಕ್ರವರ್ತಿನಿ ಶಾಂತಲ ನಾನಾಗುತ್ತೇನೆ. ನಿರಂಜನರ ಕಥೆ 'ಕೊನೆಯ ಗಿರಾಕಿ'ಯಲ್ಲಿ, ರೈಲ್ವೆ ನಿಲ್ದಾಣದಲ್ಲಿ ಕಾಮುಕರಿಗೆ ಬಲಿಯಾಗಿ ಕಡೆಯ ಗಿರಾಕಿ ಮೇಲೆ ಸುತ್ತುತ್ತಿರುವ ಹದ್ದನ್ನು ಬಿಡುಗಣ್ಣುಗಳಿಂದ ನೋಡುತ್ತಿರುವ ಹೆಸರೂ ಇಲ್ಲದ ಮೂಕ ಭಿಕ್ಷುಕಿ ನಾನಾಗುತ್ತೇನೆ. ಇಂಗ್ಲಿಷ್ ನಾಟಕಕಾರನೊಬ್ಬನ ನಾಟಕದಲ್ಲಿ ತಾನು ಸೋಲಿಸಿದ ರಾಜರನ್ನು ರಥಕ್ಕೆ ಕಟ್ಟಿ "ಕೊಬ್ಬಿದ ಸೋಮಾರಿ ಕುದುರೆಗಳೇ, ದಿನಕ್ಕೆ ಹದಿನಾರು ಮೈಲಿಗಳು ಮಾತ್ರವೇ ನೀವು ರಥ ಎಳೆಯುವುದು?" ಎಂದು ಚಾಟಿಯಿಂದ ಹೊಡೆಯುವ ಉನ್ಮತ್ತ ತೈಮೂರ್ ಲಂಗ್ ನಾನಾಗುತ್ತೇನೆ. ಪ್ರಾಚೀನ ಗ್ರೀಕ್ ಮಹಾಕಾವ್ಯದಲ್ಲಿ ಮಗನನ್ನು ಕೊಂದು ಅವನ ಹೆಣವನ್ನು ರಥಕ್ಕೆ ಕಟ್ಟಿ ಎಳೆಯುವ ಪೈಶಾಚಿಕ ಯೋಧನ ಕೈಗೆ ದೈನ್ಯದಿಂದ ಮುತ್ತಿಟ್ಟು 'ಮಗನ ಶವವನ್ನು ಕೊಡು' ಎಂದು ಬೇಡುವ ಅತಿವೃದ್ಧ ರಾಜ ಪ್ರಿಯಾಮ್ ನಾನಾಗುತ್ತೇನೆ. ಈ ವಿಸ್ತಾರವಾದ ಬದುಕಿನ ಶಿಖರಗಳಲ್ಲಿ, ಪಾತಾಳಗಳಲ್ಲಿ, ಮನುಷ್ಯ ಸ್ವಭಾವದ ಉದಾತ್ತತೆ ಮತ್ತು ನೀಚತನಗಳಲ್ಲಿ, ದೈವೀ ಪ್ರೇಮ ದಿವ್ಯ ಸ್ನೇಹ ಪೈಶಾಚಿಕ ದ್ವೇಷಗಳಲ್ಲಿ ನನ್ನನ್ನು ಇಡಬಲ್ಲ ಸಾಹಿತ್ಯವು ನನ್ನ ಸಂವೇದನೆಯನ್ನು ಸೂಕ್ಷ್ಮಗೊಳಿಸದೇ ಹೋದರೆ ಯಾವುದು ನನ್ನನ್ನು ಸೂಕ್ಷ್ಮ ಸಂವೇದನೆಯ ಮನುಷ್ಯನನ್ನಾಗಿ ಮಾಡಬಹುದು? ಭಾವಬುದ್ಧಿಗಳಮಲ ವಿದ್ಯುದಾಲಿಂಗನವಾದ ಸಾಹಿತ್ಯದ ರಚನೆಯೂ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಹೊಣೆಗಾರಿಕೆಯ ಕೆಲಸ, ಸಾಹಿತ್ಯ ವಿಮರ್ಶೆಯೂ ಹೊಣೆಗಾರಿಕೆಯ ಕೆಲಸ.

ಸಾಹಿತ್ಯ ಕೃತಿಯು ಅರ್ಥವತ್ತಾದ ಅನುಭವ, ವ್ಯವಸ್ಥಿತವಾದ ಅನುಭವ. ಸಾಹಿತಿಯ ಸಂವೇದನೆಯು ಸೂಕ್ಷ್ಮವಾದಷ್ಟು ಅವನ ಕೃತಿಯು ಸೂಕ್ಷ್ಮ ನೈತಿಕ ಎಂದರೆ ಜೀವನಪರ ಅಂಶಗಳ ಶೋಧನೆಯೂ ಆಗುತ್ತದೆ. ಶಾಸ್ತ್ರಗಳು ಲಭ್ಯ ಮಾಡುವ ಜ್ಞಾನವನ್ನು ನೇರವಾಗಿ

ಹೇಳಿಕೆಗಳ ಮೂಲಕ ಸಂವಹನ ಮಾಡಬಹುದು. ಸಾಹಿತ್ಯವೂ ಒಂದು ಬಗೆಯ ಜ್ಞಾನವೇ. ಸಾಹಿತ್ಯ ಕೃತಿಯ ಅನುಭವವು ಓದುಗನ ವ್ಯಕ್ತಿತ್ವದ ಭಾಗವಾಗಲು ಆ ಅನುಭವವನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ. ನಿಜಜೀವನದ ಅನುಭವಕ್ಕೆ ವ್ಯವಸ್ಥೆ ಇಲ್ಲ. ಸಾಹಿತ್ಯ ಕೃತಿಯಲ್ಲಿ ಅದರ ಅನುಭವವನ್ನು ವ್ಯವಸ್ಥೆಗೊಳಿಸುವ ವಿಧಾನವೇ ತಂತ್ರ. ಸಾಹಿತ್ಯ ಕೃತಿಯ ಸ್ವರೂಪ ಮತ್ತು ಅರ್ಥಗಳ ನಡುವಣ ಸೇತುವೆಯೇ ತಂತ್ರ.

ಎಫ್.ಆರ್. ಲೀವಿಸ್ ಎನ್ನುವ ಪ್ರಸಿದ್ಧವಿಮರ್ಶಕನು ಸಾಹಿತ್ಯ ವಿಮರ್ಶೆಯು ಪ್ರಾಣದಾಯಕವಾಗಿರಬೇಕು, 'ಲೈಫ್ ಗಿವಿಂಗ್' ಆಗಿರಬೇಕು ಎಂದ. ಎಂದರೆ ಅದು ಸಾಹಿತಿಯನ್ನು, ಓದುಗನನ್ನು ಬೆಳಸುವಂತಿರಬೇಕು. ನನ್ನ ಅಭಿಪ್ರಾಯದಲ್ಲಿ, ಯಾವ ಸಾಹಿತ್ಯ ಕೃತಿಯ ವಿಮರ್ಶೆಯೇ ಆಗಲಿ ಮೊದಲು ನನಗೆ ಹೇಳಬೇಕಾದದ್ದು, ಆ ಕೃತಿಯನ್ನು ಓದಲು ನನ್ನ ಆಯುಸ್ಸಿನ ನಾಲ್ಕು ಗಂಟೆಗಳನ್ನೋ ನಾಲ್ಕು ದಿನಗಳನ್ನೋ ಏಕೆ ಕೊಡಬೇಕು ಎಂಬ ಪ್ರಶ್ನೆಗೆ ಉತ್ತರ. ಸಾಹಿತ್ಯದಲ್ಲಿ ಮೌಲ್ಯಮಾಪನದ ಪ್ರಶ್ನೆ ಜಟಿಲವಾದದ್ದು ಎಂದೂ, ಸ್ಟ್ರಕ್ಚರಲ್ ಕ್ರಿಟಿಸಿಸಂ, ಡಿಕನ್ಸ್ಟ್ರಕ್ಷನ್ ಮೊದಲಾದ ಪಂಥಗಳು ಮೌಲ್ಯಮಾಪನಕ್ಕೆ ಗಮನ ಕೊಡುವುದಿಲ್ಲವೆಂದೂ ನಾನು ಬಲ್ಲೆ. ಸಾಹಿತ್ಯ ವಿಮರ್ಶೆಯ ಕಾರ್ಯ ಎರಡು ಹಂತಗಳಲ್ಲಿ ನಡೆಯುತ್ತದೆ ಎಂದು ನನ್ನ ಭಾವನೆ. ಮೊದಲ ಘಟ್ಟದಲ್ಲಿ ವಿಮರ್ಶಕ–ಓದುಗರ ಸಂವಾದ. ಗಂಭೀರವಾಗಿ ಸಾಹಿತ್ಯವನ್ನು ಓದುವ ಓದುಗರು ಈ ಘಟ್ಟದಲ್ಲಿ ಭಾಗಿಗಳು. ಈ ಘಟ್ಟದಲ್ಲಿ ಮೌಲ್ಯಮಾಪನ ಅನಿವಾರ್ಯ. ಸಾಹಿತ್ಯ ವಿಮರ್ಶೆಯು ಸಾಹಿತ್ಯವನ್ನು ಓದುವ ಬಹುಮಂದಿಗೆ ಪ್ರಸ್ತುತವಾಗಬೇಕಾದರೆ, 'ನಾನೇಕೆ ಕೃತಿಯನ್ನು ಓದಬೇಕು?' ಎಂಬ ಪ್ರಶ್ನೆಗೆ ಉತ್ತರ ದೊರೆಯಲೇಬೇಕು. ಎರಡನೆಯ ಘಟ್ಟ, ವಿಮರ್ಶಕ–ವಿಮರ್ಶಕರ ಸಂವಾದ. ಇಲ್ಲಿ ವಿಮರ್ಶಕ ಎಂದರೆ ಬಿಡಿ ಸಾಹಿತ್ಯ ಕೃತಿಗಳಲ್ಲಿ ಅಥವಾ ಸಾಹಿತಿಗಳಲ್ಲಿ ಮಾತ್ರವೇ ಆಸಕ್ತಿ ಹೊಂದದೆ, ಒಟ್ಟಾರೆ ಸಾಹಿತ್ಯದ ಅಧ್ಯಯನದಲ್ಲಿ ಆಸಕ್ತಿ ಇರುವ ಓದುಗನೂ ಸೇರುತ್ತಾನೆ. ಯಾವುದೇ ಸಾಹಿತ್ಯ ವಿಮರ್ಶೆಗೆ ಪ್ರಬುದ್ಧತೆಯನ್ನು ತಂದುಕೊಡುವುದು ಈ ಘಟ್ಟ. ಆದರೆ ಮೊದಲನೆಯ ಘಟ್ಟವನ್ನು ನಾವು ಕಡೆಗಣಿಸುತ್ತಿದ್ದೇವೆ ಎಂದು ನನಗನ್ನಿಸುತ್ತಿದೆ. ಶ್ರೇಷ್ಠ ಸಾಹಿತ್ಯ ವಿಮರ್ಶಕರೂ ಗಂಭೀರ ಆಸಕ್ತಿಯ ಓದುಗರೊಡನೆ ನೇರವಾದ ಸಂಪರ್ಕವನ್ನು ಉಳಿಸಿಕೊಳ್ಳಬೇಕು. ಮತ್ತೊಂದು ಮಾತು– ಸಾಹಿತಿ, ವಿಮರ್ಶಕ ಇಬ್ಬರೂ ಸಾಹಿತ್ಯವನ್ನು ಗಂಭೀರವಾಗಿ ಸ್ವೀಕರಿಸುವವರು. ಮನುಷ್ಯನ ಅತ್ಯಂತ ಮುಖ್ಯವಾದ, ಹೊಣೆಗಾರಿಕೆಯ ಚಟುವಟಿಕೆಗಳಲ್ಲಿ ಸಾಹಿತ್ಯ ಒಂದು ಎಂದು ಪರಿಗಣಿಸುತ್ತಾರೆ. ಆದುದರಿಂದ, ಅವರ ನಿಷ್ಠೆ ಸಾಹಿತ್ಯಕ್ಕೆ ಮೀಸಲಾಗಬೇಕು. ಸಾಹಿತಿಗಾಗಲಿ ವಿಮರ್ಶಕರಿಗಾಗಲೀ ಬದುಕಿನ ಒಂದು 'ವಿಷನ್', ಸಮಗ್ರ ದರ್ಶನ ಇರುತ್ತದೆ. ಇದಕ್ಕೆ ಬದ್ಧವಾಗಿ ಇಬ್ಬರೂ ಬರೆಯಬೇಕು. ಯಾವುದೇ ಪಂಥದ ಸಿದ್ಧಾಂತವು ಸಾಹಿತಿಯ ಅಥವಾ ವಿಮರ್ಶಕನ ಸಮಗ್ರ ದರ್ಶನದ ಭಾಗವಾಗಿ ಅವನ ಬರಹಕ್ಕಿಳಿದು ಬರುವುದೇ ಬೇರೆ, ಪ್ರಜ್ಞಾಪೂರ್ವಕವಾಗಿ ಅವನು ತನ್ನ ಬರಹವನ್ನು ಒಂದು ಸಿದ್ಧಾಂತದ ರಥಕ್ಕೆ ಹೂಡುವುದೇ ಬೇರೆ. ಸಾಹಿತ್ಯವಾಗಲಿ, ಸಾಹಿತ್ಯ ವಿಮರ್ಶೆಯಾಗಲಿ ಯಾವುದೇ ಸಿದ್ಧಾಂತದ ಸಖಿಯಾಗಬೇಕಾಗಿಲ್ಲ.

ಈ ಸಂದರ್ಭದಲ್ಲಿ ಸಂಗ್ರಹವಾಗಿ ಒಂದು ವಿಷಯವನ್ನು ಪ್ರಸ್ತಾಪಿಸಬಯಸುತ್ತೇನೆ. ಇದು ಪತ್ರಿಕೆಗಳಿಂದ ವಿಮರ್ಶೆಗೆ ಆಗಿರುವ ಉಪಕಾರ. ಪ್ರಬುದ್ಧ ಕರ್ನಾಟಕ, ಶ್ರೀ ಕೃಷ್ಣ ಸೂಕ್ತಿ, ಜಯ ಕರ್ನಾಟಕ, ಜಯಂತಿ; ರಂಗಭೂಮಿಗಳ ಕಾಲದಿಂದ ಸಾಹಿತ್ಯ ಚಿಂತನೆಗೆ ವಿಶೇಷ ಗಮನ ನೀಡಿದ ಈ ಪತ್ರಿಕೆಗಳು ಹೊಣೆಗಾರಿಕೆಯರಿತ ವಿಮರ್ಶೆಗೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿದವು, ಅದನ್ನು ಪೋಷಿಸಿದವು. ಕಳೆದ ಕೆಲವು ದಶಕಗಳಲ್ಲಿ ವಿಶಿಷ್ಟ ಕೆಲಸ ಮಾಡಿರುವ ಪತ್ರಿಕೆಗಳನ್ನು ಮೆಚ್ಚಿಕೆಯಿಂದ ಸ್ಮರಿಸಬೇಕು. ಬಹುಮಿತವಾದ ಚಂದಾದಾರರ ಸಂಖ್ಯೆ, ಏರುತ್ತಿರುವ ಮುದ್ರಣ ಮತ್ತು ಪ್ರಕಾಶನದ ವೆಚ್ಚ ಇವುಗಳ ನಡುವೆಯೂ 'ಸಾಕ್ಷಿ', 'ರುಜುವಾತು', 'ಸಂಕ್ರಮಣ', 'ಶೂದ್ರ', ಪತ್ರಿಕೆಗಳಿಂದ ಪ್ರಾರಂಭವಾಗಿ 'ಸಂಚಯ', ಸಂಕುಲ', 'ಮಾನಸ', ಸಂಕಲನ', 'ದೇಶಕಾಲ', 'ಶಬ್ದಗುಣ'ಗಳವರೆಗೆ ಪತ್ರಿಕೆಗಳು ಸಾಹಿತ್ಯ ಚಿಂತನೆ ಮತ್ತು ಚರ್ಚೆಗಳಿಗೆ ತೆರೆದಿಟ್ಟ ವೇದಿಕೆ, ಹೊಸ ಹೊಸ ಮನಸ್ಸುಗಳನ್ನು ಬರಮಾಡಿಕೊಂಡದ್ದು ಎಲ್ಲ ಅಮೂಲ್ಯ ಸಾಧನೆ. ಈ ಪತ್ರಿಕೆಗಳ ಕೆಲವು ಸಂಚಿಕೆಗಳು ಒಂದು ಗಂಭೀರ ವಿಚಾರ ಸಂಕಿರಣದಷ್ಟೇ ಸಾಧನೆಯುನ್ನು ಕೈಗೂಡಿಸಿಕೊಂಡಿವೆ. ಪ್ರಸಿದ್ಧಿಯ ಹಂಬಲವಿಲ್ಲದೆ ತಮ್ಮ ಮಿತಿಯಲ್ಲಿ ಈ ಪತ್ರಿಕೆಗಳು ನಡೆಸಿಕೊಂಡು ಬಂದಿರುವ ಸೇವಾವ್ರತಕ್ಕೆ ನಾಡು ಕೃತಜ್ಞವಾಗಿರಬೆಕು.

ಸೃಜನಾತ್ಮಕ ಪ್ರತಿಭೆಗೆ ಕೈಮರವಾಗುವ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಒಂದು ಮಾತನ್ನು ನಿವೇದಿಸಬಯಸುತ್ತೇನೆ. ಸೃಜನಾತ್ಮಕ ಪ್ರತಿಭೆಯ ಮುಂದೆ ಮಹತ್ವದ ಸವಾಲುಗಳಿವೆ. ಸಾಹಿತ್ಯ ಪ್ರತಿಭೆಯು ನಾವು ಊಹಿಸಿಕೊಳ್ಳಲೂ ಸುಲಭವಲ್ಲದ ನಾಳಿನ ಜಗತ್ತಿಗಾಗಿ ಸೃಷ್ಟಿಮಾಡಬೇಕಾಗುತ್ತದೆ. ಅಂತರ್‌ಗ್ರಹ ಸಂಚಾರವೂ ಆಕಾಶ ನಿಲ್ದಾಣಗಳೂ ಸಾಧ್ಯವಾಗಿ ಕುಟುಂಬ ವ್ಯನಸ್ಥೆಯೂ ಸಮುದಾಯ ಜೀವನವೂ ಹೊಸ ಸೆಳವುಗಳಿಗೆ ಒಳಗಾಗುವ ಜಗತ್ತು ಅದು. ಭಯೋತ್ಪಾದಕರಿಂದಾಗಿ ರೈಲ್ವೆ ನಿಲ್ದಾಣ, ಪೂಜಾಸ್ಥಳ, ಮಾರುಕಟ್ಟೆಗಳಿಗೆ ಬರುವುದೂ ಧೈರ್ಯದ ಮಾತಾಗಬಹುದಾದ ಜಗತ್ತು. ನೀರಿಗೂ ಯುದ್ಧಗಳಾಗಬಹುದಾದ ಜಗತ್ತು. ಸರ್ಕಾರಗಳು ಜನತೆಗೆ ಉಚಿತವಾಗಿ ಮಾತ್ರೆಗಳನ್ನು ಹಂಚಿ ತಿನ್ನಿಸಿ, ಅವರಿಗೆ ಹಸಿವಿನ ಅರಿವೇ ಆಗದಂತೆ ಖಚಿತಮಾಡಿಕೊಳ್ಳಬಹುದಾದ ಜಗತ್ತು. ಹಿಮಾಲಯವು ಮಾಯವಾಗಲು ಹಿಮ ಕರಗುತ್ತದೆ ಎಂದು ವಿಜ್ಞಾನಿಗಳು ಹೇಳುವ ಜಗತ್ತು. ಕ್ರಮೇಣ ಹಿಂದಿನ ಅನುಭವದ ಉಪಯುಕ್ತತೆ ಕಡಿಮೆಯಾಗುತ್ತಾ ಹೋಗಿ ಮನುಷ್ಯ ಹೊಂದಾಣಿಕೆಯ ಶಕ್ತಿಯು ದೈತ್ಯ ಸವಾಲುಗಳನ್ನು ಎದುರಿಸಬೇಕಾಗುವ ಜಗತ್ತು.

ಸಾಹಿತ್ಯ ವಿಮರ್ಶೆಯನ್ನು ಕುರಿತು ಕೆಲವು ಮಾತುಗಳನ್ನು ನಿವೇದಿಸಬಯಸುತ್ತೇನೆ. ನನಗೆ ತೌಲನಿಕ ಸಾಹಿತ್ಯದಲ್ಲಿ ಒಲವು. ನಾನು ವಿದ್ಯಾರ್ಥಿಯಾಗಿದ್ದ ಮೈಸೂರು ವಿಶ್ವವಿದ್ಯಾನಿಲಯವು ಇಂಗ್ಲಿಷ್ ಆನರ್ಸ್ ಪಾಠಕ್ರಮದಲ್ಲಿ 'ಕಂಪಾರೆಟಿವ್ ಡ್ರಾಮ' ಎನ್ನುವ ಭಾಗವನ್ನು ಸೇರಿಸಿತ್ತು. ಭಾರತದ ಬೇರೆ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಈ ಅಧ್ಯಯನ ಇರಲಿಲ್ಲ. ಇಂಗ್ಲಿಷ್ ನಾಟಕಗಳನ್ನಲ್ಲದೆ ನಮ್ಮ ಮಟ್ಟಿಗೆ ಪ್ರಾಚೀನ ಗ್ರೀಕ್, ಸಂಸ್ಕೃತ, ಫ್ರೆಂಚ್ ಭಾಷೆಗಳ ನಾಟಕಗಳನ್ನು ಅನುವಾದಗಳಲ್ಲಿ ಅಭ್ಯಾಸ ಮಾಡುವುದು ಈ ಶಿಸ್ತು.

ಇದು ನನಗೆ ತೌಲನಿಕ ಸಾಹಿತ್ಯದ ಅಧ್ಯಯನದ ಪ್ರಭಾವವನ್ನು ಮನದಟ್ಟು ಮಾಡಿತು. ಕಳೆದ ಕೆಲವು ದಶಕಗಳಲ್ಲಿ ತೌಲನಿಕ ಸಾಹಿತ್ಯದ ಅಧ್ಯಯನವು ಹಲವು ಕೇಂದ್ರಗಳಲ್ಲಿ ನಡೆಯುತ್ತಿದೆ ಎನ್ನುವುದು ನನಗೆ ಗೊತ್ತು. ಕನ್ನಡ ನಾಡಿನಲ್ಲಿ ತೌಲನಿಕ ಅಧ್ಯಯನವು ಇನ್ನೂ ಚುರುಕಾಗಬೇಕು, ವಿಸ್ತಾರವಾಗಬೇಕು. ಕನ್ನಡ ಕೃತಿಗಳನ್ನು ಒಳಗೊಳ್ಳಬೇಕು. ನಿಜವಾದ ಸಂಶೋಧನೆ ನಡೆಯಬೇಕು, ಶ್ರದ್ಧೆ ಪ್ರತಿಭೆಗಳ ಆಧಾರದ ಮೇಲೂ ನಡೆಯುವ ಅಧ್ಯಯನದ ಫಲಿತಾಂಶಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿ ಅಂತಾರಾಷ್ಟ್ರೀಯ ವಿದ್ವತ್ ಜಗತ್ತಿನ ಗಮನ ಸೆಳೆಯಬೇಕು. ವಸಾಹತುಶಾಹಿಯ ದೃಷ್ಟಿಯಿಂದ ಈ ಬಗೆಯ ಅಧ್ಯಯನಗಳು ಈಗಾಗಲೇ ನಡೆದಿವೆ. ಈಗ ನಮಗೆ ಆಫ್ರಿಕದ ಸಾಹಿತ್ಯಗಳು, ಇಸ್ರೇಲಿನ ಸಾಹಿತ್ಯ ಎಲ್ಲ ಲಭ್ಯವಿದೆ. ಬದುಕಿನಲ್ಲಿ ಯಂತ್ರಗಳು, ಪರಂಪರೆ ಮತ್ತು ಪ್ರಗತಿ, ಒಂದು ನಾಡಿನಲ್ಲಿ ಬೇರೆ ಬೇರೆ ನಾಗರಿಕತೆಗಳ ಮುಖಾಮುಖಿ, ಸಾಹಿತ್ಯದಲ್ಲಿ ಸ್ತ್ರೀ ಮತ್ತು ಪುರುಷ ಸಂವೇದನೆಗಳು ಮುಂತಾಗಿ ತೌಲನಿಕ ಅಧ್ಯಯನಕ್ಕೆ ವಿಷಯಗಳ ಗಣಿಯೇ ತೆರೆದುಕೊಂಡಿದೆ.

ತೌಲನಿಕ ಅಧ್ಯಯನವು ಇನ್ನಷ್ಟು ವಿಸ್ತಾರವನ್ನು ಪಡೆದುಕೊಂಡು ಮತ್ತೊಂದು ಆಯಾಮವನ್ನು ಕಂಡುಕೊಳ್ಳಬಹುದು. ನಮ್ಮಲ್ಲಿ ಶಿವರಾಮ ಕಾರಂತ, ಅ.ನ.ಕೃ. ಪರಂಪರೆ ಒಂದಿದೆ. ಈ ಪರಂಪರೆಯಲ್ಲಿ ಒಂದೇ ಕಲೆಗೆ ಮುಡಿಪು ಎಂದಿಲ್ಲ. ಇವರ ಆಸಕ್ತಿ ಮೂಲತಃ ಕಲೆಯಲ್ಲಿ. ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಚಿತ್ರಕಲೆ, ಶಿಲ್ಪಕಲೆ ಎಲ್ಲದರಲ್ಲಿ ಇವರ ಆಸಕ್ತಿ. ಶಿವರಾಮ ಕಾರಂತರ ಕೃತಿಗಳನ್ನು ,ಯಕ್ಷಗಾನ ಕಲೆಗೆ ಅವರ ಕೊಡುಗೆಯನ್ನು ನಾನು ಇಲ್ಲಿ ವಿವರಿಸಬೇಕಿಲ್ಲ. ಅ.ನ.ಕೃ. ಅವರ 'ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ' ಕೃತಿ ಈಗ ಕರ್ನಾಟಕದಾಚೆ ಚರ್ಚೆಯಾಗುತ್ತಿದೆ. ಅವರು ಭಾರತೀಯ ಚಿತ್ರಕಲೆಯನ್ನು ಕುರಿತು ಬರೆದಿದ್ದಾರೆ. ವಚನಗಳನ್ನು ಹಾಡುವ ಸಾಧ್ಯತೆಯನ್ನು ಅವರು ಮಲ್ಲಿಕಾರ್ಜುನ ಮನ್ಸೂರರಿಗೆ ಸೂಚಿಸಿದರು. ಇನ್ನು ಮುಂದೆ ಸಾಹಿತ್ಯ ವಿಮರ್ಶೆಯ ಎಲ್ಲ ಕಲಾ ಸೃಷ್ಟಿಯ ಅಧ್ಯಯನವನ್ನೂ, ಎಲ್ಲ ಕಲೆಗಳ ಮೂಲದ ಅಧ್ಯಯನವನ್ನೂ, ಕಲೆಗಳ ಪರಸ್ಪರ ಬಾಂಧವ್ಯದ ಅಧ್ಯಯನವನ್ನೂ ಮಾಡಬಹುದು. ಈ ಸಂದರ್ಭದಲ್ಲಿ ಪ್ರೊ. ಎಂ.ಎಚ್. ಕೃಷ್ಣಯ್ಯನವರು ಕುವೆಂಪು ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ಸಂಪಾದಿಸಿದ 'ಕುವೆಂಪು ಸಾಹಿತ್ಯ ಚಿತ್ರ ಸಂಪುಟ'ವನ್ನು ಸ್ಮರಿಸಬೇಕು.

ತೌಲನಿಕ ಸಾಹಿತ್ಯ ಅಧ್ಯಯನವು ಜಾಗತೀಕರಣದ ಒಂದು ಸ್ವಾಗತಾರ್ಹ ಆಯಾಮ. ಆದರೆ ಜಾಗತೀಕರಣ ಎನ್ನುವುದು ನಿಜವಾಗಿ ಅಮೇರಿಕೀಕರಣವಾಗುತ್ತಿದೆ. ಕೊಳ್ಳುಬಾಕ ಸಂಸ್ಕೃತಿ, ಹಣದ ಮತ್ತು ಶಕ್ತಿಯ ಆರಾದನೆ ಇವು ನಮ್ಮ ಮನೋಧರ್ಮವನ್ನು ರೂಪಿಸುತ್ತಿವೆ. ಈ ಅಮೇರಿಕೀಕರಣವು ನಮ್ಮ ಪತ್ರಿಕಾ ಪ್ರಪಂಚ ಮತ್ತು ವಿಶ್ವವಿದ್ಯಾನಿಲಯಗಳಿಗೂ ತನ್ನ ಕಬಂಧಬಾಹುಗಳನ್ನು ಚಾಚುತ್ತಿದೆ. ಶಿಕ್ಷಣ ಕ್ಷೇತ್ರ ಮತ್ತು ಸಮೂಹ ಮಾಧ್ಯಮಗಳ ಕ್ಷೇತ್ರಗಳಲ್ಲಿ ಅಮೇರಿಕದ ನೇರ ಅಥವಾ ಪರೋಕ್ಷ ಪ್ರಭಾವಕ್ಕೆ ಅವಕಾಶಕೊಡುವುದು ನಮ್ಮ ಬೌದ್ಧಿಕ ಸ್ವಾತಂತ್ರ್ಯಕ್ಕೆ, ಚಿಂತನ ಸ್ವಾತಂತ್ರ್ಯಕ್ಕೆ ಮಾರಕ. ಇದನ್ನು ತಡೆಯಬಲ್ಲ ಶಕ್ತಿಗಳಲ್ಲಿ ಒಂದು ಸಾಹಿತ್ಯ. ೧೯೭೦ರಿಂದೀಚೆಗೆ ನಮ್ಮ ಸಾಹಿತ್ಯ

ಮತ್ತು ಜನಜೀವನವು ದೇಸಿಯತ್ತ ತಿರುಗುತ್ತಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ. ಈ ಅವಧಿಯಲ್ಲಿ ದಲಿತ ಸಾಹಿತ್ಯವು ಅರಳಿದ್ದು, ೧೯೭೦ರಿಂದ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಚೈತನ್ಯ ನುಗ್ಗಿ ಬಂದಿದೆ. ಆರು ದಶಕಗಳಿಂದ ಕನ್ನಡ ಸಾಹಿತ್ಯದ ನಡೆಗೆ ಸಾಕ್ಷಿಯಾಗಿ ಬಾಳಿದ ನಾನು ಖುಷಿಯಿಂದ ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಕಳೆದ ಮೂವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯವೂ ವಿಮರ್ಶೆಯೂ ಒಂದು ಹೊಸ ಚೈತನ್ಯವನ್ನೂ, ತಮ್ಮತನವನ್ನೂ, ದಿಟ್ಟತನವನ್ನೂ ತೋರಿಸಿವೆ. ಕನ್ನಡ ನಾಡಿನ ಕಾರಯಿತ್ರೀ ಪ್ರತಿಭೆ, ಭಾವಯತ್ರೀ ಪ್ರತಿಭೆ ಎರಡೂ ಹೊಸ ಶಕ್ತಿಯಿಂದ ಕಾರ್ಯಪ್ರವೃತ್ತವಾದಂತೆ ಭಾಸವಾಗುತ್ತದೆ. 'ಫೆಮಿನಿಸಂ' ಸ್ತ್ರೀವಾದವಾಗಿ ಪ್ರಾರಂಭವಾಗಿ ಅದನ್ನು ಒಳಗೊಂಡು ಆದರೆ ಮೀರಿ ಸ್ತ್ರೀ ಸಂವೇದನೆಯ ಸಾಹಿತ್ಯ ಮತ್ತು ವಿಮರ್ಶೆಯಾಗಿ ಬೆಳೆಯುತ್ತಿರುವುದು ಒಂದು ಸಂತೋಷದ ಬೆಳವಣಿಗೆ. ಜಾನಪದ ಅಧ್ಯಯನವಂತೂ ವ್ಯವಸ್ಥಿತವಾಗಿ ಬಹುಮುಖವಾಗಿ ಬೆಳೆಯುತ್ತಿದೆ. ಈ ಅಧ್ಯಯನಕ್ಕೆ ಪ್ರತಿಭೆ ಮನಸ್ಸು ಮಾಡಿದರೆ ಎಷ್ಟು ಫಲಪ್ರದವಾಗಬಹುದು ಎಂಬುದನ್ನೇ ಪ್ರೊ. ಸಿ.ಎನ್. ರಾಮಚಂದ್ರನ್ ಅವರ 'ಹೊಸ ನುಡಿಯ ಮೇಲೆ ಚದುರಂಗ"ದಂಥ ಕೃತಿಯಲ್ಲಿ ಕಾಣಬಹುದು.

ಕನ್ನಡ ಭಾಷೆಯ ಬೆಳವಣಿಗೆಯ ಕಾರ್ಯ ವ್ಯವಸ್ಥಿತವಾಗಿ ನಡೆಯಬೇಕು ಮತ್ತು ಈ ಕಾರ್ಯದಲ್ಲಿ ನಿರತವಾದ ಸಂಸ್ಥೆಗಳ ನಡುವೆ ವ್ಯವಸ್ಥಿತವಾದ ಹೊಂದಾಣಿಕೆಯ ಅಗತ್ಯವಿದೆ. ಕನ್ನಡ ವಿಶ್ವವಿದ್ಯಾನಿಲಯ, ಎಲ್ಲ ವಿಶ್ವವಿದ್ಯಾನಿಲಯಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಈ ಎಲ್ಲ ಸಂಸ್ಥೆಗಳ ಯೋಜನೆಗಳು ಮತ್ತು ಪ್ರಕಟಣೆಗಳ ವಿಷಯಗಳಲ್ಲಿ ಹೊಂದಾಣಿಕೆಗೆ ವ್ಯವಸ್ಥೆಯ ಅಗತ್ಯವಿದೆ.

ಸುತ್ತಲಿನ ಬದುಕು ಬೆಳೆದಂತೆ ಕನ್ನಡ ಬೆಳೆಯಬೇಕು. ಕನ್ನಡವು ಆಧುನಿಕ ಭಾಷೆಯಾಗಬೇಕು. ಯಾವಾಗ ಆಧುನಿಕ ಭಾಷೆಯಾಗುತ್ತದೆ? ಜಗತ್ತಿನಲ್ಲಿನ ಅತ್ಯಾಧುನಿಕ ಜ್ಞಾನವನ್ನು ನಿಖರವಾಗಿ ಅಭಿವ್ಯಕ್ತಿ ಮಾಡುವ ಸಾಮರ್ಥ್ಯ ಬಂದರೆ ಅದು ಆಧುನಿಕ ಭಾಷೆಯಾಗುತ್ತದೆ. ಇಂದು ಅತ್ಯಾಧುನಿಕ ಜ್ಞಾನವನ್ನು ಕನ್ನಡದಲ್ಲಿ ಅಭಿವ್ಯಕ್ತಿ ಮಾಡಲು ಯಾರು ತಾನೇ ಏಕೆ ಪ್ರಯತ್ನಿಸುತ್ತಾರೆ? ಪುಸ್ತಕ ಬರೆದರೆ ಆ ಮಟ್ಟದ ಪುಸ್ತಕಗಳನ್ನು ಕೊಳ್ಳುವವರು ಯಾರು?

ಸಮಸ್ಯೆಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಕನ್ನಡವು ಆಧುನಿಕ ಜ್ಞಾನವನ್ನು ಸಂವಹನ ಮಾಡಬಲ್ಲ ಭಾಷೆಯಾಗಬೇಕಾದರೆ ಅದನ್ನು ಉನ್ನತ ಮಟ್ಟದಲ್ಲಿ ಬಳಸಿ ಪುಸ್ತಕಗಳನ್ನು ಬರೆಯಬೇಕು. ಪುಸ್ತಕಗಳನ್ನು ಬರೆಯಬೇಕಾದರೆ ಅದನ್ನು ಓದುವವರಿರಬೇಕು. ಅವನ್ನು ಓದುವವರಿರಬೇಕಾದರೆ ಕನ್ನಡ ಭಾಷೆಯು ಬೋಧನೆಯ ಮಾಧ್ಯಮವಾಗಬೇಕು. ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಸಂತೋಷ ಕೊಡುವಂತಿರಬೇಕು. ಪಠ್ಯಪುಸ್ತಕ ರಚನೆಗೆ ತರಬೇತಿ ಅಗತ್ಯ. ಒಳ್ಳೆಯ ಶಿಕ್ಷಕರೆಲ್ಲ ಒಳ್ಳೆಯ ಪಠ್ಯಪುಸ್ತಕಗಳನ್ನು ರಚಿಸಲಾರರು. ನಮ್ಮಲ್ಲಿ ಅನೇಕ ಪಠ್ಯಪುಸ್ತಕಗಳು ಕಣ್ಣಿನಲ್ಲಿ ನೀರು ತರಿಸುವಷ್ಟು ನೀರಸವಾಗಿವೆ.

ನಾಡಿನಲ್ಲಿ ವಿದ್ವತ್ತಿನ ಅನ್ವೇಷಣೆಗೆ ಪೋಷಕವಾದ ವಾತಾವರಣವನ್ನು ಸೃಷ್ಟಿಸಬೇಕೆಂದು ಸರ್ಕಾರದಲ್ಲಿಯೂ, ವಿಶ್ವವಿದ್ಯಾನಿಲಯಗಳಲ್ಲಿಯೂ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ

ನನ್ನ ಮನವಿ. ಹಳೆಗನ್ನಡ, ವ್ಯಾಕರಣ, ಛಂದಸ್ಸು ಮೊದಲಾದವುಗಳ ಅಧ್ಯಯನವು ಮುಂದುವರೆಯಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ನಿಘಂಟಿನ ಕಾರ್ಯ ಮುಂದುವರೆಯಲು ಗ್ರಂಥಾಲಯವನ್ನು ಸಜ್ಜುಗೊಳಿಸಬೇಕು. ಸರ್ಕಾರವು ಹಣ ಸಹಾಯವನ್ನು ನೀಡಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಮಟ್ಟದ ಸಂಶೋಧನೆ ನಡೆಯಬೇಕು. ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಅನ್ವಯುವಾಗುವ ಸಾಮಾನ್ಯ ನಿಯಮಗಳೇನೋ ಇವೆ.ಇವು ಆಡಳಿತಕ್ಕೆ ಅನ್ವಯಿಸುವವು.ವಿದ್ವತ್ತಿನ ಕೆಲಸಕ್ಕೆ ಹೊಂದಾಣಿಕೆಯ ಅಭಾವವಿದೆ. ಜಗತ್ತಿನ ಇನ್ನೂ ು ಅತ್ಯುತ್ತಮ ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ಭಾರತದ ಒಂದೂ ವಿಶ್ವವಿದ್ಯಾಲಂಯದ ಹೆಸರಿಲ್ಲ. ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಸುಧಾರಿಸಿ ಕರ್ನಾಟಕದ ವಿಶ್ವವಿದ್ಯಾನಿಲಯಗಳನ್ನು ಜಾಗತಿಕ ಮಟ್ಟಕ್ಕೆ ಏರುವ ಸಂಕಲ್ಪವನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಮಾಡಬೇಕು. ಉನ್ನತ ಮಟ್ಟದ ವಿದ್ವತ್ ಪತ್ರಿಕೆಗಳು ಕನ್ನಡದಲ್ಲಿ ಎಷ್ಟಿವೆ?

ಇದಕ್ಕೆಲ್ಲ ಅಡಿಪಾಯವಾಗಿ ನಿರ್ಮಿಸಬೇಕಾದದ್ದು ಪ್ರಾಥಮಿಕ ಶಾಲೆಯ ಸ್ಥಿತಿಯನ್ನು, ಬೋಧನೆಯನ್ನು. ಆ ಮಟ್ಟದಲ್ಲಿ ಕನ್ನಡದ ಕಲಿಕೆ ಕೇಂದ್ರೀಯ ಶಾಲೆಗಳಲ್ಲಿ ಕಡ್ಡಾಯವಾಗಬೇಕು. ಬಿಸಿ ಊಟ, ಉಚಿತ ಪಠ್ಯ ಪುಸ್ತಕಗಳು ಮೊದಲಾದ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಶಾಲೆಗಳನ್ನು ಬಿಟ್ಟಿದ್ದ ಸಾವಿರಾರು ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ತಂದ ಶಿಕ್ಷಣ ಇಲಾಖೆಯನ್ನು ಅಭಿನಂದಿಸಬೇಕು. ಆದರೆ ಎಲ್ಲ ಶಾಲೆಗಳಿಗೆ ಸೂಕ್ತವಾದ ಮತ್ತು ಶೌಚಾಲಯಗಳಿರುವ ಕಟ್ಟಡಗಳನ್ನು ಲಭ್ಯ ಮಾಡಬೇಕು. ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಲು ಪೋಷಕರಿಗೆ ಸಂತೋಷವಾಗುವಂತೆ ಆ ಶಾಲೆಗಳನ್ನು ನಿರ್ವಹಿಸಬೇಕು. ಸರ್ಕಾರಿ ಶಾಲೆಗಳು ಮಾದರಿ ಶಾಲೆಗಳಾಗಬೇಕು. ಕನ್ನಡ ನಾಡಿನಲ್ಲಿ ಯಾವುದೇ ಉದ್ಯೋಗಕ್ಕೆ ಕನ್ನಡದ ತಿಳುವಳಿಕೆ ಕಡ್ಡಾಯವಾಗಬೇಕು. ಕನ್ನಡ ಅನ್ನವನ್ನು ಕೊಡಬಲ್ಲ ಭಾಷೆಯಾಗಬೇಕು. ಕನ್ನಡವು ಶಿಕ್ಷಣದ ಮಾಧ್ಯಮವಾಗಬೇಕು. ಇಂಗ್ಲಿಷ್ ಭಾಷೆಯನ್ನು ಮೊದಲನೇ ತರಗತಿಯಿಂದ ಬೋಧಿಸುವುದಕ್ಕೆ ಈಗಲೂ ನನ್ನ ವಿರೋಧವಿದೆ. ಕನ್ನಡದಿಂದ ತೀರಾ ಭಿನ್ನವಾದ ಇಂಗ್ಲಿಷ್ ಭಾಷೆಯನ್ನು ಕನ್ನಡದೊಂದಿಗೆ ಕಲಿಯುವಾಗ, ಇಂಗ್ಲಿಷ್ ಭಾಷೆಯ ಬಳಕೆಯ ವಾತಾವರಣವಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಮಗುವಿನ ಮನಸ್ಸಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳ ವಾಕ್ಯಗಳ ರಚನೆಗಳು, ರೀತಿಗಳು ಗೊಂದಲವನ್ನುಂಟು ಮಾಡುತ್ತವೆ. ಇಂಗ್ಲಿಷ್ ಬೋಧನೆಯನ್ನು ಪ್ರಾರಂಭಿಸಿದ ಮೇಲೆ, ಅದು ಎಷ್ಟು ಸಾರ್ಥಕವಾಗಿದೆ ಎನ್ನುವುದನ್ನು ನಿರ್ಧರಿಸಲು ಏನೂ ಪ್ರಯತ್ನ ನಡೆದಿಲ್ಲ. ಇದೊಂದು ದೊಡ್ಡ ಲೋಪ. ಪ್ರಾಥಮಿಕ ತರಗತಿಯಿಂದ ಪದವಿ ತರಗತಿಯವರೆಗೆ ಇಂಗ್ಲಿಷ್ ಬೋಧನೆಯ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಸಮಗ್ರವಾಗಿ ಶಿಫಾರಸು ಮಾಡಲು ಇಂಗ್ಲಿಷ್ ಬೋಧನೆಯ ತಜ್ಞರೂ ಇರುವ ಸಮಿತಿಯೊಂದನ್ನು ಸರ್ಕಾರವಾಗಲಿ ಕನ್ನಡ ಸಾಹಿತ್ಯ ಪರಿಷತ್ತಾಗಲೀ ರಚಿಸುವುದು ಸೂಕ್ತ. ಮುಖ್ಯವಾಗಿ, ಕನ್ನಡ ನಾಡಿನ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದಕ್ಕಬೇಕು.

(ಮುಂದುವರೆಯುವುದು...)

ಜ್ಞಾನ ಮತ್ತು ಶ್ರಮದ ಸಮನ್ವಯಿ ಅಗಸ್ತ್ಯ, ತ್ಯಾಗದ ಪರಾಕಾಷ್ಠತೆಯ ಮೂರ್ತಿ ದಧೀಚಿ

– ವಿನೋಬಾ

ಚಳಿಗಾಲದ ದಿನಗಳಲ್ಲಿ ಬೆಳಗಿನ ಜಾವ ದಕ್ಷಿಣ ದಿಕ್ಕಿನಲ್ಲಿ ಅಗಸ್ತ್ಯ ನಕ್ಷತ್ರ ಕಾಣುತ್ತದೆ. ಸಾಕಷ್ಟು ದೊಡ್ಡದಾಗಿದೆ. ಸತತವಾಗಿ ಮಿನುಗುತ್ತಿರುತ್ತದೆ. ಗ್ರಹಗಳ ಹೊರತಾಗಿ ಇರುವ ನಕ್ಷತ್ರಗಳೆಲ್ಲವೂ ಮಿನುಗುತ್ತಿರುತ್ತವೆ. ಆದರೆ ಅಗಸ್ತ್ಯ ನಕ್ಷತ್ರದ ಮಿನುಗುವಿಕೆಯಲ್ಲಿ ಒಂದು ವಿಶೇಷತೆ ಇರುತ್ತದೆ. ಅದು ಯಾವಾಗಲೂ ದಕ್ಷಿಣದಲ್ಲಿಯೇ ಇರುತ್ತದೆ.

ಅಗಸ್ತ್ಯರು ವೈದಿಕ ಋಷಿ. ಋಗ್ವೇದದ ಮೊದಲನೆಯ ಮಂಡಲದಲ್ಲಿ ಇವರಿಗೆ ಸಂಬಂಧಿಸಿದ ಬಹಳಷ್ಟು ಸೂಕ್ತಗಳಿವೆ. ಅಗಸ್ತ್ಯ ದೊಡ್ಡ ತಪಸ್ವಿಯಾಗಿದ್ದರು. ಅವರ ಹೆಂಡತಿಯ ಹೆಸರು ಲೋಪಾಮುದ್ರಾ, ಅವಳು ನಿರಂತರವಾಗಿ ತನ್ನ ಗಂಡನ ಕೆಲಸದಲ್ಲಿ ಸಹಾಯ ಮಾಡಿಕೊಂಡಿರುತ್ತಿದ್ದಳು. ಅವಳು ತನ್ನ 'ಮುದ್ರೆಯನ್ನು' ಪ್ರತ್ಯೇಕವಾಗಿ ಇಡಲೇ ಇಲ್ಲ. ಹೀಗೆ ಪತಿಯ ರೂಪವಾಗಿ ಪತಿಯ ಮುದ್ರೆಯಲ್ಲಿಯೇ ಅವಳು ತನ್ನನ್ನು ಲೋಪ ಮಾಡಿಕೊಂಡಿದ್ದಳು. ಗಂಡನ ಜೊತೆಗೆ ಅವಳೂ ಕೂಡ ತಪಸ್ಸನ್ನು ಮಾಡುತ್ತಿದ್ದಳು. ಒಂದು ಸಲ ಅವಳು ತನ್ನ ಪತಿಯನ್ನು "ನಾವು ಇಷ್ಟೊಂದು ತಪಸ್ಸನ್ನು ಮಾಡುತ್ತೇವೆ, ಇದರ ಪರಿಣಾಮವೇನು?" ಎಂದು ಕೇಳಿದಳು. ಅಗಸ್ತ್ಯ ಋಷಿ ಈ ರೀತಿ ಉತ್ತರ ಕೊಟ್ಟರು, "ನಮ್ಮ ಪ್ರಯತ್ನಗಳು ವ್ಯರ್ಥವಾಗಿಲ್ಲ. ಏಕೆಂದರೆ ಭಗವಂತನು ನಮ್ಮ ರಕ್ಷಣೆ ಮಾಡುತ್ತಿದ್ದಾನೆ." ಅಗಸ್ತ್ಯರು ಯಾವಾಗಲೂ ಗುದ್ದಲಿಯಿಂದ ಅಗೆಯುವ ಕೆಲಸ ಮಾಡುತ್ತಿದ್ದರೆಂದು ವೇದಗಳಲ್ಲಿ ಉಲ್ಲೇಖಿಸಲಾಗಿದೆ. ಮೂಲತಃ ಅವರು ಉತ್ತರದವರು. ಆದರೆ ಗುದ್ದಲಿಯ ಬಲದಿಂದ ಅವರು ದಕ್ಷಿಣಕ್ಕೆ ಬಂದು ನೆಲಸಿದರು. ಇತಿಹಾಸಕ್ಕೆ ಗೊತ್ತಿರುವಂಥ ಮೊಟ್ಟಮೊದಲನೆಯ ಉಪನಿವೇಶನ ಸ್ಥಾಪಿಸಿದ ವ್ಯಕ್ತಿ ಅಗಸ್ತ್ಯರೇ ಆಗಿದ್ದಾರೆ. ಮೊಟ್ಟಮೊದಲು ಅವರು ವಿಂಧ್ಯಾಚಲವನ್ನು ಕತ್ತರಿಸಿ ದಾರಿ ನಿರ್ಮಿಸಿದರು. ಈ ಕಾರಣದಿಂದಾಗಿ ಇವರ ಹೆಸರು ಅಗ–ಸತ್ಯ ಅಂದರೆ ಬೆಟ್ಟವನ್ನು ಕಡಿಯುವವನು ಎಂದಾಯಿತು. ಎಲ್ಲ ಪರ್ವತಗಳಲ್ಲಿ ಎಲ್ಲವುಗಳಿಗಿಂತ ಎತ್ತರವಾದದ್ದು ಹಿಮಾಲಯ. ಆದರೆ ಶಾಸ್ತ್ರಜ್ಞರ ಅಭಿಪ್ರಾಯದ ಮೇರೆಗೆ ಅದು ವಯಸ್ಸಿನಲ್ಲಿ ಚಿಕ್ಕದಾಗಿದೆ. ಈ ಹಿಮಾಲಯ, ನಿನ್ನೆಯ ಹುಡುಗ ಈ ಹಿಮಾಲಯ, ವೃದ್ಧ ವಿಂಧ್ಯದೊಂದಿಗೆ ಸ್ಪರ್ಧೆ ಮಾಡಲಾರಂಭಿಸಿದ. ಇದು ವಿಂಧ್ಯಕ್ಕೆ ಸಹನೆಯಾಗಲಿಲ್ಲ. ಆದ್ದರಿಂದ ವಿಂಧ್ಯ ಕೂಡ ಎತ್ತರವಾಗಿ ಬೆಳೆಯಲಾರಂಭಿಸಿತು. ಇವರಿಬ್ಬರ ಸ್ಪರ್ಧೆಯಿಂದಾಗಿ ಬಡಪಾಯಿ ಭಾರತಕ್ಕೆ ಉಸಿರುಗಟ್ಟಲಾರಂಭಿಸಿತು. ಅಷ್ಟು ಹೊತ್ತಿಗೆ ಅಗಸ್ತ್ಯ ಋಷಿ ಗುದ್ದಲಿಯಿಂದ ಅಗೆಯುತ್ತಾ–ಅಗೆಯುತ್ತಾ ಅಲ್ಲಿಗೆ ಬಂದು ತಲುಪಿದರು. ಇಂಥ ಮಹಾನ್ ಋಷಿ ತನ್ನ ಬಳಿಗೆ ಬಂದಿರುವುದನ್ನು ನೋಡಿ ವಿಂಧ್ಯ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿತು. ವಿಂಧ್ಯಕ್ಕೆ ನಮ್ರತೆಯ ಪಾಠ ಕಲಿಸಬೇಕೆಂದು ಋಷಿಗನಿಸಿತು. ಆದ್ದರಿಂದ ಅವರು ಎದ್ದೇಳಲು ಅದಕ್ಕೆ ಅಪ್ಪಣೆ ಕೊಡಲಿಲ್ಲ ಮತ್ತು ಅವರು ನೇರವಾಗಿ ದಕ್ಷಿಣದ ಕಡೆಗೆ ಹೋಗಿಬಿಟ್ಟರು. ಆದ್ದರಿಂದ ವಿಂಧ್ಯದ ಎತ್ತರ ಸರ್ವಕಾಲಕ್ಕೂ ಕಡಿಮೆಯಾಯಿತು. ವಿಂಧ್ಯಪರ್ವತ ಅಗಸ್ತ್ಯರ ಎದುರಿನಲ್ಲಿ ಬಾಗಿತು. ಬಾಗಿತು ಎಂದರೇನು? ಅಗಸ್ತ್ಯರು ವಿಂಧ್ಯವನ್ನು ಅಗೆದು ಅಗೆದು ದಾಟಿ ಹೋಗಲು ದಾರಿಯನ್ನು

ಮಾಡಿದರು. ಈ ಪ್ರಕಾರ ಇದೆ; ಅವರ ಕರ್ತವ್ಯದ ಕಥೆ.

ಇನ್ನೂ ಒಂದು ಕಥೆ ಇದೆ. ಸಮುದ್ರವು ಅಗಸ್ತ್ಯ ಋಷಿಗೆ ಹೆದರಿತು. ಅಂದರೆ ಅವರು ಸಮುದ್ರವನ್ನು ದಾಟಿ ಮಲೇಷಿಯಾದಲ್ಲಿ ಉಪನಿವೇಶನ ಮಾಡಿದರು. ಹೀಗೆ ಅವರು ಉಪನಿವೇಶನಗಳನ್ನು ಸ್ಥಾಪಿಸಿದಂಥವರಾಗಿದ್ದರು. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಹೋದರು ಮತ್ತು ಅಲ್ಲಿಂದ ವಿದೇಶಕ್ಕೆ!

ಬೆಳಗಿನ ಜಾವ ಅಗಸ್ತ್ಯ ನಕ್ಷತ್ರ ಕಾಣಬರುತ್ತದೆ, ಅದರ ಭಯದಿಂದ ಇಡೀ ಜಲ ಸ್ವಚ್ಛವಾಗುತ್ತದೆಂದು ಹೇಳುತ್ತಾರೆ. ಅಗಸ್ತ್ಯರು ಸಮುದ್ರವನ್ನು ಕುಡಿದುಬಿಟ್ಟಿದ್ದರು. ಆದ್ದರಿಂದ ಅಗಸ್ತ್ಯ ನಕ್ಷತ್ರದ ಉದಯವಾದಾಗ ಅವರ ಭಯದಿಂದ ನದಿಯ ನೀರು ಸ್ವಚ್ಛವಾಗಿಬಿಡುತ್ತದೆ.

ಅಗಸ್ತ್ಯ ಋಷಿಯ ಜೀವನ ರಹಸ್ಯವನ್ನು ವೇದದಲ್ಲಿ ಹೇಳಲಾಗಿದೆ–

ಅಗಸ್ತ್ಯಃ ಖನಮಾನಃ ಖನಿತ್ರೈಃ ಪ್ರಜಾಮಪತ್ಯಂ ಬಲಮಿಚ್ಛಮಾನಃ ।
ಉಭವು ವರ್ಣಾಋಷಿರುಗ್ರಹ ಪ್ರಪೋಷ ಸತ್ಯ ದೇವಶ್ವ ಶಿಶೂಜಗಾಮ ॥ (೨೪.೭)

'ಈ ಉಗ್ರ ಋಷಿಯು ಎರಡೂ ವರ್ಣಗಳ ಆಪೋಷಣೆ ಮಾಡಿದರು.' ಸಮಾಜದಲ್ಲಿ ಎರಡು ಪ್ರಕಾರದ ಜನರಿರುತ್ತಾರೆ. ಒಂದು ಶರೀರದಿಂದ ದುಡಿಯುವಂಥವರು ಮತ್ತು ಎರಡನೆಯವರು ಬುದ್ಧಿ ಪ್ರಧಾನ ಕೆಲಸ ಮಾಡುವಂಥವರು. ಶ್ರಮ ನಿಷ್ಠ, ಶ್ರಮ ಪ್ರಧಾನ ವರ್ಣ ಮತ್ತು ಜ್ಞಾನ ನಿಷ್ಠ, ಜ್ಞಾನ ಪ್ರಧಾನ ವರ್ಣ. ಎಲ್ಲ ಜನರು ಈ ಒಂದಲ್ಲ ಒಂದು ವರ್ಣಕ್ಕೆ ಸೇರಿದವರಾಗಿರುತ್ತಾರೆ. ಆದರೆ ಅಗಸ್ತ್ಯ ಋಷಿ ದ್ವೈ–ವರ್ಣಿಗಳಾಗಿದ್ದರು. ಋಷಿಯಾಗಿದ್ದ ಕಾರಣದಿಂದ ಅವರಿಗೆ ಜ್ಞಾನ ದರ್ಶನವಂತೂ ಇದ್ದೇ ಇತ್ತು, ಜೊತೆ ಜೊತೆಗೆ ಗುದ್ದಲಿಯಿಂದ ಅಗೆಯುವ ಕರ್ಮವನ್ನೂ ಮಾಡುತ್ತಿದ್ದರು. ಶ್ರಮಯೋಗಿ ಆಗಿದ್ದರಿಂದ ಅವರ ಶರೀರದ ಮೇಲೆ ಕೃಷ್ಣವರ್ಣ ಬಂದಿತು. ಮತ್ತು ಧ್ಯಾನಯೋಗಿ ಋಷಿ ಆಗಿದ್ದ ಕಾರಣದಿಂದ ಅವರಲ್ಲಿ ಶುಕ್ಲವರ್ಣ ಕೂಡ ಇತ್ತು. ಹೀಗೆ ಅವರಲ್ಲಿ ಶುಕ್ಲ ಮತ್ತು ಕೃಷ್ಣ ಬಣ್ಣ(ವರ್ಣ)ಗಳು ಒಂದಾಗಿದ್ದವು.

ಪ್ರಾಚೀನ ಋಷಿಗಳ ಬಗ್ಗೆ ಒಪ್ಪಲಾದ ಒಂದು ಮಾತಿದೆ. ಏನೆಂದರೆ, ಎರಡು ವರ್ಣಗಳು ಬೇರೆ ಇವೆ. ಇದು ಸರಿಯಲ್ಲ. ಇವೆರಡೂ ಒಂದಾಗಬೇಕು. ಒಳಗಡೆಗೆ ಜ್ಞಾನ ನಿಷ್ಠೆ ಮತ್ತು ಹೊರಗಡೆಗೆ ಶ್ರಮ ನಿಷ್ಠೆ ಇರಬೇಕು. ಎರಡೂ ಶಕ್ತಿಗಳ ಸಂಯೋಗ ಒಂದೇ ವ್ಯಕ್ತಿಯಲ್ಲಿ ಆಗಬೇಕು. ಇಂಥ ಉತ್ತಮ ಆದರ್ಶವನ್ನು ಅಗಸ್ತ್ಯ ಋಷಿ ಮಂಡಿಸಿದ್ದಾರೆ. ಅಗಸ್ತ್ಯರು ಮಂತ್ರದ್ರಷ್ಟಾರ ಋಷಿ ಕೂಡ ಆಗಿದ್ದರು. ಮತ್ತು ಗುದ್ದಲಿ ಉಪಯೋಗಿಸಿ ತಮ್ಮ ಉದರ ಪೋಷಣೆ ಮಾಡಿಕೊಳ್ಳುವ ಕೂಲಿಯೂ ಆಗಿದ್ದರು. ಈ ಪ್ರಕಾರ ಅವರಲ್ಲಿ ಎರಡೂ ವರ್ಣಗಳ ಮಿಲನವಾಗಿತ್ತು. **ಖನಮಾನಃ ಖನಿತ್ರೈಃ** ಖನಿತ್ರ– ಗುದ್ದಲಿ ಉಪಯೋಗಿಸಿ ಆ ಉಗ್ರ ಋಷಿಯು ಎರಡೂ ವರ್ಣಗಳ ಆಪೋಷಣೆ ಮಾಡಿದರು. ಅಗಸ್ತ್ಯರಿಗೆ 'ಉಗ್ರ ಋಷಿ' ಎಂಬ ಹೆಸರನ್ನು ಕೊಡಲಾಯಿತು. **ಋಷಿರುಗ್ರಃ** ಅವರು ಋಷಿಯಂತೂ ಆಗಿದ್ದರು, ದ್ರಷ್ಟಾ ಇದ್ದುದರಿಂದ ಋಷಿಯಾಗಿದ್ದಾರೆ. ಆದರೆ 'ಉಗ್ರ'ವಾಗಿದ್ದಾರೆ. ಕೊಡಲಿ ಮತ್ತು ಗುದ್ದಲಿಯಿಂದ ಅರಣ್ಯವನ್ನು ಕಡಿದು ಮತ್ತು ಅಗೆದು ಅವರು ದಕ್ಷಿಣಭಾರತವನ್ನು ಸ್ಥಾಪಿಸಿದರು. ಆದ್ದರಿಂದ ಅಗಸ್ತ್ಯರ ಹೆಸರಿನ ನಕ್ಷತ್ರವನ್ನು ದಕ್ಷಿಣ ದಿಕ್ಕಿಗೆ ಇಡಲಾಗಿದೆ. ಅವರು ಉಗ್ರ ಋಷಿಯಾಗಿದ್ದರು. ಶ್ರಮ ನಿಷ್ಠೆ ಮತ್ತು ಜ್ಞಾನ ನಿಷ್ಠೆ ಎರಡೂ ಶಕ್ತಿಗಳ ಸಂಯೋಗ, ಸಾಮರಸ್ಯ, ಸಮನ್ವಯ ಅವರಲ್ಲಿ ಆಗಿತ್ತು. ಆ ಮಹಾನ್ ಋಷಿ ಎರಡೂ ವರ್ಣಗಳ ಆಪೋಷಣೆ ಮಾಡಿದರು.

ಉಭಯ ವರ್ಣಾರುಪಿಗ್ರಹಃ ಪುಪ್ಪೋಷ. ಶಾರೀರಿಕ ಪರಿಶ್ರಮದಿಂದ ಒಂದು ವರ್ಣ ಮತ್ತು ಮಾನಸಿಕ ಪರಿಶ್ರಮದಿಂದ ಎರಡನೆ ವರ್ಣವನ್ನು ಆಪ್ಪೋಷಣೆ ಮಾಡಿದರು. ಜ್ಞಾನಯುಕ್ತ ಪರಿಶ್ರಮಿ ಆಗಿದ್ದರ ಕಾರಣದಿಂದ ಈ ಮಹಾಪುರುಷನನ್ನು ಕೃಷಿ ಎಂದು ಕರೆಯಲಾಯಿತು.

ಅಗಸ್ತ್ಯರ ಗುದ್ದಲಿ ಕೂಲಿಯ ಪ್ರತ್ಯಕ್ಷ ಮೂರ್ತಿ. ಎಲ್ಲರೂ ಈ ದೇವತೆಯ ಉಪಾಸನೆ ಮಾಡಬೇಕು. ಈ ತತ್ವ ಸದಾ ಎಲ್ಲರ ಸಮ್ಮುಖದಲ್ಲಿರಲೆಂದು ಅಗಸ್ತ್ಯರಿಗೆ ನಕ್ಷತ್ರಗಳಲ್ಲಿ ಸ್ಥಾನ ಕೊಡಲಾಯಿತು. ದಕ್ಷಿಣದ ಈ ನಕ್ಷತ್ರದ ಸಂದೇಶವನ್ನು ಎಲ್ಲರೂ ಗ್ರಹಿಸಲಿ.

ಯಜುರ್ವೇದದ ಅಂತಿಮ ಅಧ್ಯಾಯ ಮತ್ತು ಶಾಂತಿಪಾಠದ ಅಧ್ಯಾಯದ ದ್ರಷ್ಟಾರ ಋಷಿ ದಧೀಚಿ ಎಂದು ತಿಳಿಯಲಾಗುತ್ತದೆ. –"ದಧ್ಯಡ್ ಅಥರ್ವಣ" ಇದೇ ಅಧ್ಯಾಯದಲ್ಲಿ ಕಿಂಚಿತ್ ಕ್ರಮ ಭೇದದೊಂದಿಗೆ ಈಶಾವಾಸ್ಯ ಉಪನಿಷತ್ ಅನ್ನು ಎತ್ತಿಕೊಳ್ಳಲಾಗಿದೆ. ತಮಿಳು ಭಾಷೆಯ ಶ್ರೇಷ್ಠ ಧರ್ಮಗ್ರಂಥವಾದ 'ಕ್ಕುರಳ'ದಲ್ಲಿ ಹೀಗೆ ಹೇಳಲಾಗಿದೆ, "ಬುದ್ಧಿಯಿರುವ ಮನುಷ್ಯ ಈ ಮೂಳೆ ಕೂಡ ನನ್ನದಲ್ಲ, ಜಗತ್ತಿನದು ಮತ್ತು ಯಾರು ಮೂರ್ಖರಿದ್ದಾರೊ ಅವರು ನಾನು ಈ ಜಗತ್ತಿನ ಯಜಮಾನ ಅಥವಾ ಮಾಲೀಕ ಎಂದು ತಿಳಿಯುತ್ತಾನೆ. ಯಾರ ಹೃದಯ ಕರುಣೆಯಿಂದಲೂ ಮತ್ತು ಪ್ರೇಮದಿಂದಲೂ ತುಂಬಿದೆಯೊ ಅವರು ಈ ಮೂಳೆ ಕೂಡ ತನ್ನದಲ್ಲವೆಂದು ತಿಳಿಯುತ್ತಾರೆ. ದಧೀಚಿ ಋಷಿಯು ಜಗತ್ತಿಗಾಗಿ ಇಡೀ ಶರೀರವನ್ನು ತೀರಿಸಿಬಿಟ್ಟರು. ಅಂದಿನ ದಿನಗಳಲ್ಲಿ ಇಂದ್ರ ಮತ್ತು ವೃತ್ರಾಸುರರ ಯುದ್ಧ ನಡೆಯುತ್ತಿತ್ತು. ಇಂದ್ರನು ದಧೀಚಿಗೆ ಹೇಳಿದ, "ನೀವು ನಿಮ್ಮ ಮೂಳೆಯನ್ನು ಕೊಟ್ಟರೆ ಅದರಿಂದ ವಜ್ರವಾಗುವುದು ಮತ್ತು ಅದರಿಂದ ವೃತ್ರಾಸುರನನ್ನು ಪರಾಜಯ ಮಾಡಲು ಸಾಧ್ಯ." ಆಗ ಧದೀಚಿ ಅಂದರು "ನನ್ನ ಬಳಿ ಇದ್ದಂತಹದೆಲ್ಲವನ್ನು ಜಗತ್ತಿಗೆ ಕೊಟ್ಟುಬಿಟ್ಟಿದ್ದೆ, ಮೂಳೆ ಮಾತ್ರ ಉಳಿದಿತ್ತು. ಭಗವಂತನ ಕೃಪೆಯಿಂದ ಅದನ್ನೂ ಕೊಡುವ ಅವಕಾಶ ಬಂದಿದೆ". ಹೀಗೆ ಹೇಳಿ ದಧೀಚಿ ತಮ್ಮ ಶರೀರ ವಿಸರ್ಜನೆ ಮಾಡಿದರು. ಆ ಮೂಳೆಯಿಂದ ವಜ್ರಾಯುಧವನ್ನು ಮಾಡಲಾಯಿತು ಮತ್ತು ವೃತ್ರಾಸುರನ ಸೋಲಾಯಿತು. ದಧೀಚಿ ಪ್ರೇಮ ಭಾವನೆಯಿಂದ ತುಂಬಿದಂಥವರಾಗಿದ್ದರು. ಆದ್ದರಿಂದ ಅವರು ತಮ್ಮ ಮೂಳೆಯೂ ಕೂಡ ಎಲ್ಲರದ್ದೆಂದು ತಿಳಿದಿದ್ದರು. ಜಗತ್ತಿನ ಕಲ್ಯಾಣಕ್ಕಾಗಿ ತನ್ನ ಆಹುತಿ, ಇದು ಅಹಿಂಸೆ. ವೇದದಲ್ಲಿ ಇದರ ವರ್ಣನೆ ಬಂದಿದೆ– **ಇಂದ್ರೋ ದಧೀಚೋ ಹಸ್ತಭಿಃ ವೃತ್ರಾಣ್ಯ ಪ್ರತಿಷ್ಕೃತಃ ॥** (೧.೧೩.೬) ಇಂದ್ರನ ಈ ಆಯುಧ ತಪಸ್ಸು–ತ್ಯಾಗ ಮತ್ತು ಅಹಿಂಸೆಯ ಉಪಲಕ್ಷಣವಾಗಿದೆ. ಈಶಾವಾಸ್ಯ ಉಪನಿಷತ್ತಿನ ಋಷಿ 'ನಾರಾಯಣ'ನೆಂದು ತಿಳಿಯಲಾಗಿದೆ. ಇದರ ಅರ್ಥ, ನಾರಾಯಣ ಸ್ವರೂಪನಾದ ಯಾವುದೇ ಅಹಂ ಶೂನ್ಯ ಋಷಿ. ಅವನ ಹೆಸರು ಗೊತ್ತಿಲ್ಲ. ಅಂದರೆ ಯಾರು ತನ್ನ ಹೆಸರನ್ನು ಲೋಪಮಾಡಬಲ್ಲನೋ ಅವನು. ಯಾರೋ ದಧ್ಯಡ್ ಅಥರ್ವಣ ಋಷಿಯೆಂದು ತಿಳಿದಿದ್ದಾರೆ. ಇವರ ಬಗ್ಗೆ ಮಧು ವಿದ್ಯೆಯ ದ್ರಷ್ಟಾರ ರೂಪದಲ್ಲಿ ಬೃಹದಾರಣ್ಯಕದಲ್ಲಿ ವರ್ಣನೆಯಿದೆ (ಬೃಹ.೨,೫,೧೬,೧೭). ಈಶಾವಾಸ್ಯ ಎಲ್ಲ ಉಪನಿಷತ್‌ಗಳ ಮಧುವಾಗಿರುವುದರಿಂದ ಈ ಕಲ್ಪನೆ ಉಚಿತವಾಗಿದೆ ಮತ್ತು **ತ್ಯಕ್ತೇನ ಭುಂಜೀತಾಃ**ದ ಶಿಕ್ಷಣವನ್ನು ದಧೀಚಿ ಋಷಿಯಂಥವರ ತ್ಯಾಗ ಮೂರ್ತಿಗಳ ಮುಖದಿಂದ ಕೇಳುವುದರಲ್ಲಿ ವಿಶೇಷ ಸ್ವಾರಸ್ಯವಿದೆ.

ಅನು : ಸುರೇಂದ್ರ ಕೌಲಗಿ

(ಮುಂದುವರೆಯುವುದು.......)

ಸಂಗೀತ ಕಲಾವಿದರು – ೩

ಗಾಯಕಿ
ಶುಭಾ ಮುದಗಲ್

ಸಂಗೀತಕ್ಕೆ ಸಮರ್ಪಿತಗೊಂಡ ಕುಟುಂಬದಲ್ಲಿ ಜನಿಸಿದ ಶುಭಾ ಮುದಗಲ್‌ರವರು ಭಾರತದ ಕೆಲ ಅತ್ಯುತ್ತಮ ಸಂಗೀತಗಾರರೂ ಮತ್ತು ಸಂಗೀತಜ್ಞರಿಂದಲೂ ಶಿಕ್ಷಣ ಪಡೆದರು. ಪಂಡಿತ್ ರಾಮಾಶ್ರಯ ಝಾ ಅವರಿಂದ ಅಲಹಾಬಾದ್‌ನಲ್ಲಿ ತರಬೇತಿ ಪಡೆದರು. ಇಂದಿಗೂ ಶುಭಾರವರು ಝಾ ಅವರಿಂದ ಸಲಹೆಗಳನ್ನು ಪಡೆಯುತ್ತಿರುತ್ತಾರೆ. ಶುಭಾ ದೆಹಲಿಗೆ ಬಂದ ನಂತರ ಪಂಡಿತ್ ವಿನಯ್‌ಚಂದ್ರ ಮುದಗಲ್ ಅವರಿಂದ ಮತ್ತು ಪಂಡಿತ್ ವಸಂತ ಠಕಾರ್ ಅವರಿಂದ ಮಾರ್ಗದರ್ಶನ ಪಡೆದರು. ಸುಪ್ರಸಿದ್ಧ ಸಂಗೀತಜ್ಞರಾದ ಪಂಡಿತ್ ಅಭಿಶೇಕ್ ಮತ್ತು ಪಂಡಿತ್ ಗಂಧರ್ವರಿಂದ ವಿಶಿಷ್ಟ ತಂತ್ರಗಾರಿಕೆಯನ್ನು ಕಲಿತರು. ಅವರು ಶ್ರೀಮತಿ ನೈನಾದೇವರಿಂದ ಠುಮರಿಯಲ್ಲಿ ಶಿಕ್ಷಣ ಪಡೆದರು. ಆದ್ದರಿಂದ ಶುಭಾರವರು ಹಿಂದೂಸ್ತಾನಿ ಸಂಗೀತದ ಅತ್ಯಂತ ಶ್ರೇಷ್ಠ ಪರಿಣಿತಿ ಪಡೆದ ಮತ್ತು ಜನಪ್ರೀಯತೆ ಪಡೆದ ಕಲಾಕಾರರಾಗಿದ್ದಾರೆ.

ಸಂಗೀತ ಪ್ರದರ್ಶನದ ಜೊತೆಗೆ ಶುಭಾರವರು ರಚನಾಕಾರರಾಗಿಯೂ ಮನ್ನಣೆಗಳಿಸಿದ್ದಾರೆ. ಅವರು ಮಧ್ಯಯುಗದ ಭಕ್ತಿಕಾವ್ಯ ಮತ್ತು ಸೂಫಿ ಕಾವ್ಯಗಳ ಜೊತೆ ಜೊತೆಗೆ ಕಬೀರ, ನಾಮದೇವ, ಅಮಿರ್ ಖುಸ್ರೋ ಮುಂತಾದವರ ರಚನೆಗಳನ್ನು ಸ್ವರಬದ್ಧಗೊಳಿಸಿದ್ದಾರೆ. ಶುಭಾರವರು ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಅವುಗಳಲ್ಲಿ ಭಾರತ ಸರ್ಕಾರದ ಮೂಲಕ ೨೦೦೦ನೇ ಇಸವಿಯಲ್ಲಿ ದೊರೆತ 'ಪದ್ಮಶ್ರೀ' ಕೂಡ ಇದೆ. ಆಕಾಶವಾಣಿ ಮತ್ತು ದೂರದರ್ಶನದ ಕಲಾಕಾರರಾಗಿರುವುದರ ಜೊತೆಗೆ ಶುಭಾರವರು ಭಾರತ ಮತ್ತು ವಿಶ್ವದ ಅನೇಕ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ.

(ಮುಂದುವರಿಯುವುದು ..)

* * *

ಸಂತಾಪ

ಕನ್ನಡದ ಸಾಹಿತ್ಯ ಲೋಕದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದ ವ್ಯಾಸರಾಯ ಬಲ್ಲಾಳರು ೩೦-೦೧-೨೦೦೮ ರಂದು ತೀರಿಕೊಂಡರು. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತ್ತು. ತಮ್ಮ ಜೀವನದ ಹೆಚ್ಚಿನ ಭಾಗವನ್ನು ಮುಂಬೈ ನಗರದಲ್ಲಿ ಕಳೆದಿದ್ದರೂ ಕೂಡ ಕನ್ನಡಕ್ಕಾಗಿ ಕೆಲಸಮಾಡಿ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದರು. ವ್ಯಾಸರಾಯ ಬಲ್ಲಾಳರ ನಿಧನಕ್ಕಾಗಿ ಜನಪದ ವಿಚಾರವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಜನಪದ ವ್ಯಕ್ತಿ

ಕೆ. ಸಿ. ಲಕ್ಷ್ಮೀನರಸಯ್ಯ

– ಎಚ್.ಎಸ್. ದೊರೆಸ್ವಾಮಿ

ನನ್ನ ಪ್ರಿಯ ಮಿತ್ರರಾದ ಕೋಳಾಲದ ಶ್ರೀ ಕೆ.ಸಿ. ಲಕ್ಷ್ಮೀನರಸಯ್ಯನವರು ನಿಷ್ಠಾವಂತ ಸರ್ವೋದಯ ಕಾರ್ಯಕರ್ತರು. ನಮ್ಮ ಈ ಸ್ನೇಹ ಸುಮಾರು ೨೦ ವರ್ಷದಷ್ಟು ಹಳೆಯದು. ಅವರು ಸರ್ವೋದಯ ಸಭೆ ಸಮ್ಮೇಳನಗಳಲ್ಲೆಲ್ಲ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಕೊರಟಗೆರೆ ತಾಲ್ಲೂಕಿನ ಸರ್ವೋದಯ ಪಾದಯಾತ್ರೆಯಲ್ಲಿ ನಾನೂ ಅವರೂ ಒಂದು ತಂಡದಲ್ಲಿದ್ದೆವು. ಆಗ ಅವರ ನಿಕಟ ಸಂಪರ್ಕವಾಯಿತು. ಗಾಂಧೀಜಿ, ವಿನೋಬಾ ಅವರ ಬಗೆಗೆ ಅವರಿಗಿದ್ದ ಪೂಜ್ಯ ಭಾವನೆ, ಸರ್ವೋದಯ ಸಿದ್ಧಾಂತವನ್ನು ಸಮಗ್ರವಾಗಿ ತಿಳಿಯಲು ಅವರಿಗಿದ್ದ ಆಸಕ್ತಿ ಇವು ಅವರಲ್ಲಿ ನನಗಿದ್ದ ಗೌರವವನ್ನು ಹೆಚ್ಚಿಸಿತು. ಲಕ್ಷ್ಮೀನರಸಯ್ಯನವರು ಶಿಕ್ಷಕರಾಗಿ ನಿವೃತ್ತರಾದವರು ಎಂಬುದನ್ನು ನಾನು ತಿಳಿದಿದ್ದೆ. ಆದರೆ ಅವರು ಹಿಂದಿ ಶಿಕ್ಷಕರು ಎಂಬುದು ನನಗೆ ಗೊತ್ತಿರಲಿಲ್ಲ. ಅವರು ಅಖಿಲ ಭಾರತ ಪ್ರವಾಸವನ್ನು ಕೈಗೊಳ್ಳುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಇವರ ಯಾತ್ರೆಗೆ ಭಾಷೆಯ ತೊಡಕು ಬರಬಹುದು ಎಂದುಕೊಂಡೆ. ಇವರು ಸರ್ವೋದಯ ಪಾದಯಾತ್ರೆಯಲ್ಲಿ ತಿಂಗಳು ಎರಡು ತಿಂಗಳು ತೊಡಗಿಕೊಂಡು ಏಕಾಗ್ರತೆಯಿಂದ ಕೆಲಸ ಮಾಡುವುದನ್ನು ನಾನು ಕಂಡಿದ್ದೆನಾದರೂ ವರ್ಷಗಟ್ಟಲೆ ಹೇಗೆ ಇವರು ಊರು, ಮನೆ, ಹೊಲ ಬಿಟ್ಟು ಇರಬಲ್ಲರು ಎಂಬ ಬಗೆಗೆ ನನ್ನಲ್ಲಿ ಸಂದೇಹ ಉಂಟಾಗಿತ್ತು. ಆದರೂ ಅವರ ಸದುದ್ದೇಶಕ್ಕೆ ಭಂಗ ಬರಬಾರದೆಂಬ ದೃಷ್ಟಿಯಿಂದ ಅವರನ್ನು ನಿರುತ್ಸಾಹಿಗಳನ್ನಾಗಿ ಮಾಡಲು ನಾನು ಬಯಸಲಿಲ್ಲ. ಆ ನಂತರ ಅವರು ಮನೆ ಬಿಡುವುದಕ್ಕೆ ಮೊದಲು ಮಾಡಿದ ವ್ಯವಸ್ಥೆಯನ್ನು ಕುರಿತು ನನಗೆ ವರದಿ ಮಾಡಿದಾಗ ಇವರು ವ್ಯವಸ್ಥಿತವಾಗಿ ತಮ್ಮ ಪ್ರವಾಸಕ್ಕೆ ಏರ್ಪಾಡು ಮಾಡುತ್ತಿದ್ದಾರೆಂದು ಭಾಸವಾಯಿತು. ಅದಕ್ಕೆ ಬೇಕಾದ ಮನೋದಾರ್ಢ್ಯವೂ ಇದೆ ಎಂಬುದರ ಅರಿವಾಯಿತು.

ಗೊತ್ತುಮಾಡಿದ ರೀತಿಯಲ್ಲಿ ಒಂದು ದಿನ ಲಕ್ಷ್ಮೀನರಸಯ್ಯ ಊರು ಬಿಟ್ಟು ಹೊರಟೇಬಿಟ್ಟರು. ಹತ್ತಿರ ಹತ್ತಿರ ಮೂರುವರ್ಷಕಾಲ ಪಾದಯಾತ್ರೆ ಮಾಡುತ್ತಾ ಇಡೀ ಭಾರತವನ್ನು ಸುತ್ತಾಡಿದರು. ಒಮ್ಮೆಯೂ ಮನೆ, ಹೆಂಡತಿ, ಮಕ್ಕಳು, ಹೊಲ, ಪೆನ್‌ಷನ್ ಹಣ ಯಾವುದೇ ವಿಚಾರಕ್ಕೆ ತಲೆಕೆಡಿಸಿಕೊಳ್ಳಲಿಲ್ಲ. ಹರಿಯುವ ಪವಿತ್ರ ನದಿಯಂತೆ, ಭಗವಾನ್ ಸೂರ್ಯನಂತೆ ಅಖಂಡವಾಗಿ, ಅವ್ಯಾಹತವಾಗಿ ತನ್ಮಯತೆಯಿಂದ ಪಾದಯಾತ್ರೆಯಲ್ಲಿ ಮಗ್ನರಾದರು. ಇದನ್ನೇ ಸಾತತ್ಯಯೋಗ ಎನ್ನುವುದು. ಹಿಂದೀ ಚೆನ್ನಾಗಿ ಬರುತ್ತಿತ್ತಾದ್ದರಿಂದ ಅವರಿಗೆ ಭಾಷೆಯ ತೊಡಕು ಅಡ್ಡಿ ಬರಲಿಲ್ಲ. ಹಿಂದಿಯೇತರ ಪ್ರಾಂತ್ಯಗಳಲ್ಲಿ ಹಿಂದೀ ಮತ್ತು ಇಂಗ್ಲಿಷ್ ಎರಡನ್ನೂ ಬಳಸಿಕೊಂಡು ತಮ್ಮ ಯಾತ್ರೆಯ ಸಾಫಲ್ಯತೆಯನ್ನು ಕಂಡುಕೊಂಡರು. ಲಕ್ಷ್ಮೀನರಸಯ್ಯನವರ ಜೊತೆಗೆ ನಾನು ಇಷ್ಟು ವರ್ಷ ಕೂಡಿ ಕೆಲಸ ಮಾಡಿದ್ದೆನಾದರೂ ಈ ಸಾಧಕನ ಸಂಕಲ್ಪಶಕ್ತಿ, ದೃಢ ಆತ್ಮವಿಶ್ವಾಸ, ತಾನು ತನ್ನದು ಎನ್ನುವುದನ್ನೆ ಸಂಪೂರ್ಣವಾಗಿ ತೊರೆವ ಮಾನಸಿಕ ಸಿದ್ಧತೆ ಇವೆಲ್ಲ ನನಗೆ ತಿಳಿದೇ ಇರಲಿಲ್ಲವಲ್ಲಾ ಎಂದು ಯೋಚಿಸಿದಾಗ ನಾನು ನನ್ನ ಸ್ನೇಹದ ಗಾಢತೆಯ

ಬಗೆಗೇ ಶಂಕಿತನಾಗಿದ್ದೇನೆ.

ಅದೇನೇ ಇರಲಿ ನನ್ನ ಮಿತ್ರ ತಾನು ಮಾಡಿದ್ದ ಸಂಕಲ್ಪವನ್ನು ಕುಂದುಬರದಂತೆ ಸಾದಿಸಿಯೇ ಬಿಟ್ಟರು. ಅವರ ವಿನಯಶೀಲತೆ, ಸಜ್ಜನಿಕೆಯಿಂದಾಗಿ ಅವರು ಹೋದಲ್ಲೆಲ್ಲಾ ಅವರಿಗೆ ಸುಸ್ವಾಗತ ದೊರೆಯಿತು. ಅವರು ಜಯಭೇರಿ ಹೊಡೆದು ಹಿಂತಿರುಗಿದರು.

ಅವರ ಭಾರತ ಪ್ರವಾಸಕಥನ ರಮ್ಯವಾಗಿದೆ. ಉತ್ಪ್ರೇಕ್ಷೆ, ಆತ್ಮಪ್ರಶಂಸೆ, ಏನೋ ದೊಡ್ಡದನ್ನು ಸಾಧಿಸಿದೆನೆಂಬ ಅಹಂಕಾರ ಒಂದೂ ಅವರಿಗೆ ಒಗ್ಗದ ವಿಷಯ. ಅವರು ತಮ್ಮ ಪಾದಯಾತ್ರೆಯಲ್ಲಿ ಅನೇಕ ಸಾಧು-ಸಜ್ಜನರನ್ನೂ, ಸಾಧಕರನ್ನೂ, ರಚನಾತ್ಮಕ ಕಾರ್ಯಕರ್ತರನ್ನೂ, ಮುಗ್ಧ ಬಾಲಕ-ಬಾಲಕಿಯರನ್ನೂ ಸಂಧಿಸಿ ಅವರಲ್ಲಿ ವಿಚಾರವಿನಿಮಯ ಮಾಡಿಕೊಂಡಿದ್ದಾರೆ. ದೇಶ ಸುತ್ತಿ ಹೆಚ್ಚು ಜ್ಞಾನಿಗಳಾಗಿ, ಆನಂದ ತುಂದಿಲರಾಗಿ ಅರ್ಥಾತ್ ಒಬ್ಬ ಹೊಸ ಮನುಷ್ಯರಾಗಿ ಹಿಂದಿರುಗಿದ್ದಾರೆ.

ಇವರ ಯಾತ್ರೆಯಿಂದ ದೇಶಕ್ಕೆ ಏನು ಲಾಭವಾಯಿತೊ ಬಿಟ್ಟಿತೊ ಅದು ನಮಗೆ ಮುಖ್ಯವಲ್ಲ. ಒಬ್ಬ ಮನುಷ್ಯ ಸಂಕಲ್ಪ ಮಾಡಿದರೆ, ಶ್ರದ್ಧಾವಂತನಾದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದನ್ನು ಮಿತ್ರ ಲಕ್ಷ್ಮೀನರಸಯ್ಯನವರ ಈ ಭಾರತ ಯಾತ್ರೆಯಿಂದ ನಾವು ಅರಿಯಬಹುದಾಗಿದೆ.

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಸಿ.ಎಸ್. ನಾರಾಯಣರಾವ್**
ಸ್ವಾತಂತ್ರ್ಯ ಹೋರಾಟದ ಉಜ್ವಲ ಕಿಡಿ
(ಸಾಮಾನ್ಯನೊಬ್ಬನ ರೋಚಕ ಬದುಕು)

ಲೇಖಕರು : **ಸಿ.ಎಸ್. ನಾರಾಯಣರಾವ್**

ಪ್ರಕಾಶಕರು : ಶ್ರೀಮತಿ ಚಂದ್ರಪ್ರಭ, ಶ್ರೀ ಕೆ.ಪಾಂಡುರಂಗಪ್ಪ ಪ್ರಕಾಶನ, ಬೆಂಗಳೂರು.

ಪುಟಗಳು : ೨೩೦ + ೩೨ ಬೆಲೆ : ೧೦೦/- ರೂ

ಕರ್ನಾಟಕ ಜನ್ಮವಿತ್ತ ಸಹಸ್ರಾರು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಶ್ರೀ ಸಿ.ಎಸ್. ನಾರಾಯಣರಾವ್ ಕೂಡ ಒಬ್ಬರು. ಇವರು ತಮ್ಮ ಸ್ವಾತಂತ್ರ್ಯ ಹೋರಾಟದ ಪ್ರಯೋಜನವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡವರಲ್ಲ. ತಿಳುವಳಿಕೆ ಬಂದಾಗಿನಿಂದಲೂ ಹೋರಾಟದ ಮನೋಭಾವನೆಯನ್ನು ಬೆಳೆಸಿಕೊಂಡ ನಾರಾಯಣರಾವ್ ತಮ್ಮ ಇಂದಿನ ಇಳಿವಯಸ್ಸಿನಲ್ಲಿಯೂ ಹೋರಾಟದ ಕೆಚ್ಚನ್ನು ಉಳಿಸಿಕೊಂಡಿದ್ದಾರೆ. ಅಂದು ಇಂಗ್ಲಿಷರ ಆಡಳಿತದ ವಿರುದ್ಧ ಕೆಚ್ಚನ್ನು ಹೊಂದಿದ್ದರೆ. ಈಗ ಸಮಾಜದಲ್ಲಿಯ ವಿವಿಧ ಲೋಪದೋಷಗಳ, ಅನ್ಯಾಯಗಳ ವಿರುದ್ಧ ಹೋರಾಟ ಮಾಡುವ ಕೆಚ್ಚನ್ನು ಕಾಯ್ದುಕೊಂಡು ಬಂದಿದ್ದಾರೆ. ನಾರಾಯಣರಾವ್ ಈ ಪುಸ್ತಕದಲ್ಲಿ ತಮ್ಮ ಜೀವನದ ಅನೇಕ ಘಟನೆಗಳನ್ನು ರೋಚಕವಾಗಿ ನಿರೂಪಿಸಿದ್ದಾರೆ. ತಮ್ಮ ಗುರು ಚಿಕ್ಕನಾಯಕನಹಳ್ಳಿಯ ಜಿ.ವಿ. ನಾರಾಯಣಮೂರ್ತಿಯವರನ್ನು ಬಹವಾಗಿ ನೆನೆದುಕೊಂಡಿದ್ದಾರೆ. ಶಾಲಾ-ಕಾಲೇಜು ಗ್ರಂಥಾಲಯಗಳಲ್ಲಿರಬೇಕಾದಂಥ ಪುಸ್ತಕವಿದು.

ಗಾಂಧೀ ವಿಚಾರಚಕ್ರ ತಿರುಗುತ್ತಿರುವ ತಾಣ ವಾತ್ಸಲ್ಯಧಾಮ

– ಗಾಣಧಾಳು ಶ್ರೀಕಂಠ

ಪ್ರೀತಿ, ಸಹಬಾಳ್ವೆ, ಸ್ವಾವಲಂಬಿ ಬದುಕು ಇವು ಗಾಂಧೀ ಕಂಡ ಕನಸುಗಳು. ಅವರ ಆಪ್ತ ಶಿಷ್ಯ ವಿನೋಬಾಜಿ, ಆ ಕನಸುಗಳನ್ನು ನನಸು ಮಾಡಲು ಶಿಷ್ಯವೃಂದವನ್ನೇ ತಯಾರಿಸಿದರು. ಈಗ ಅವರಿಬ್ಬರೂ ಇಲ್ಲ. ಆದರೆ ಅವರ ತತ್ವ, ವಿಚಾರಗಳಿನ್ನೂ ಕೆಲವೆಡೆ ಜೀವಂತವಾಗಿವೆ. ಇದಕ್ಕೆ ನಿದರ್ಶನ ಈ 'ವಾತ್ಸಲ್ಯಧಾಮ'.

ಬಾಗಲಕೋಟೆ ಜಿಲ್ಲೆ ಮುಧೋಳದಿಂದ ಮಹಾಲಿಂಗಾಪುರ ರಸ್ತೆಯಲ್ಲಿ ಮೂರು ಕಿ.ಮಿ. ಕ್ರಮಿಸಿದರೆ ಎಡಭಾಗದಲ್ಲಿ ಶ್ವೇತವರ್ಣದ ಮನೆಯೊಂದು ಕಾಣುತ್ತದೆ. ಇದೇ ಪ್ರೀತಿ, ವಾತ್ಸಲ್ಯ ತುಂಬಿರುವ, ಸ್ವಾವಲಂಬಿ ಜೀವನದ ಪ್ರತೀಕದಂತಿರುವ 'ವಾತ್ಸಲ್ಯಧಾಮ'. ಇಲ್ಲಿ ಗಾಂಧೀ ವಿಚಾರಧಾರೆಗಳನ್ನು ಅಕ್ಷರಶಃ ಅಳವಡಿಸಿಕೊಂಡಿರುವ ಸ್ವಾಮಿ ಸೇವಾನಂದಜೀ, ನಾರಾಯಣ ಭಾಯಿ, ಮೀರಾ ಕೊಪ್ಪೀಕರ್, ರಮೇಶ್ ಕಳೆದ ೨೫ ವರ್ಷಗಳಿಂದ ಜೀವನ ನಡೆಸುತ್ತಿದ್ದಾರೆ.

ಇವರು ಒಂದೇ ಊರಿನವರಲ್ಲ, ಸಂಬಂಧಿಗಳೂ ಅಲ್ಲ. ಆದರೆ ಇವರೆಲ್ಲರ ತತ್ವ ಹಾಗೂ ಗುರಿ ಒಂದೇ. ತಮ್ಮ ರಕ್ತ ಸಂಬಂಧಿಗಳನ್ನೆಲ್ಲ ತೊರೆದು, ಈ ವಾತ್ಸಲ್ಯಧಾಮದಲ್ಲಿ ಇತರರ ಒಳಿತಿಗೆ ಪ್ರಾರ್ಥಿಸುತ್ತಾ, ಜೀವನಕ್ಕೆ ಬೇಕಾಗುವಷ್ಟು ದುಡಿಯುತ್ತಾ ಸ್ವಾವಲಂಬಿಗಳಾಗಿ ಸಹ ಜೀವನ ನಡೆಸುತ್ತಿದ್ದಾರೆ.

ಸ್ವಾಮಿ ಸೇವಾನಂದಜೀಗೆ ಈಗ ೯೦ ವರ್ಷ. ಹೆಸರಿಗೆ ತಕ್ಕಂತಯೇ 'ಸೇವಾ ಜೀವನ'. ೧೯೫೬ ರಲ್ಲೇ ವಿನೋಬಾ ಭಾವೆಯವರ ಸರ್ವೋದಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಈಗ ವಯಸ್ಸು ಶತಮಾನದ ಹತ್ತಿರ ಸಾಗಿರುವುದರಿಂದ ದೇಹದಲ್ಲಿ ಶಕ್ತಿ ಕುಂದಿದೆ. ಸ್ವಲ್ಪ ಅನಾರೋಗ್ಯವೂ ಕಾಡುತ್ತಿದೆ. ಆದರೆ ಪಂಚೇಂದ್ರಿಯಗಳು ಸೂಕ್ಷ್ಮವಾಗಿವೆ. ನೆನಪಿನ ಶಕ್ತಿಯಂತೂ ಊಹಿಸಲಸಾಧ್ಯ. ಆಶ್ರಮದಲ್ಲಿ ಹಿರಿಯ ವ್ಯಕ್ತಿಯಾದರೂ ಹೊರಗಿನ ಜನಕ್ಕೆ 'ಸ್ವಾಮೀಜಿ' ಎಂದೇ ಪರಿಚಿತರಾದವರು.

ಕೇರಳದ ತಿರುಚನಾಪಳ್ಳಿಯ ನಾರಾಯಣ ಭಾಯಿಗೆ ೭೫ ವರ್ಷ. ಬಾಲ್ಯದಿಂದಲೂ ಗಾಂಧೀ ವಿಚಾರ ಮೈಗೂಡಿಸಿಕೊಂಡವರು. ೩೮ ವರ್ಷ ರೈಲ್ವೆ ಇಲಾಖೆಯಲ್ಲಿ ದುಡಿದ ಇವರಿಗೆ ಈ ಜೀವನ 'ಸ್ವಾರ್ಥ' ಎನಿಸಿತು. ಆಗ ವಿನೋಬಾ ಭಾವೆ ಸಂಗಡ ಸರ್ವೋದಯದ ಹಾದಿ ಹಿಡಿದರು. ಸ್ವಾಮಿ ಸೇವಾನಂದಜಿ ಜತೆ ಸೇರಿದರು. 'ಕಡಿಮೆ ಬಳಸಿ'– ಇದು ಅವರ ಧ್ಯೇಯ ವಾಕ್ಯ. ಹಾಗಾಗಿ ಇವರ ಜೀವನದಲ್ಲಿ ನಿರುಪಯುಕ್ತ ವಸ್ತುಗಳೇ ಇಲ್ಲ. ಪ್ರತಿ ನಿಮಿಷವನ್ನು ಕಾಯಕದಲ್ಲಿ ತೊಡಗಿಸಿಕೊಳ್ಳಬೇಕೆನ್ನುವ ಇವರಿಗೆ ಪುಸ್ತಕವೇ ಮೆಚ್ಚಿನ ಸಂಗಾತಿ. ಹೀಗಿರುವ ನಾರಾಯಣರು ಜನರಿಗೆ 'ಭಾಯಿಜಿ' ಆದರು.

ಸ್ಥಿತಿವಂತ ಕುಟುಂಬದಿಂದ ಬಂದ ಹೆಣ್ಣುಮಗಳು ಮೀರಾ ಕೊಪ್ಪಿಕರ್‌ಗೆ ಈಗ ೮೧ ವರ್ಷ. ಆಶ್ರಮದ 'ವಾತ್ಸಲ್ಯದ ಅಮ್ಮ'. ಇತರರ ಪಾಲಿಗೆ ಆತ್ಮೀಯ 'ಅಕ್ಕ'. ಇವರು ಧಾರವಾಡದವರು. ಸೋದರ, ಸೋದರಿಯರ ತುಂಬು ಕುಟುಂಬದಲ್ಲಿ ಬೆಳೆದವರು.

ಆದರೆ ೧೩ನೇ ವಯಸ್ಸಿನಲ್ಲಿ ತಂದೆ ತೀರಿಕೊಂಡಾಗ ಮೀರಾಗೆ ದಿಕ್ಕು ತೋಚದಾಯಿತು. ತರಚಿದ ಗಾಯಕ್ಕೆ ಮುಲಾಮು ಹಚ್ಚಿದಂತೆ, ಗಾಂಧೀ–ವಿನೋಬಾ ಇವರ ವಿಚಾರಗಳು ಮೀರಾಗೆ ಸಂಜೀವಿನಿಯಾದವು, ಸರ್ವೋದಯ ಚಳವಳಿಗಿಳಿಯಲು ಪ್ರೇರಣೆಯಾದವು. ಬೆಂಗಳೂರಿನ ರಮೇಶ್ ವ್ಯಾಪಾರಸ್ಥ ಕುಟುಂಬದವರು. ತಾಯಿ ಸರ್ವೋದಯ ಕಾರ್ಯಕರ್ತೆಯಾಗಿ ಬೆಂಗಳೂರಿನ ಗಾಂಧೀ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದರು. ತಾಯಿಯ ವಿಚಾರಗಳು ರಮೇಶ್ ಅವರನ್ನು ೧೨ನೇ ವಯಸ್ಸಿಗೆ ಸರ್ವೋದಯ ಬದುಕಿಗೆ ಕರೆತಂದವು.

ಸ್ವಾಮೀಜಿ, ಭಾಯೀಜಿ, ಅಕ್ಕಾಜಿ ಮೂವರೂ ಪೂನಾದ ಕಾಂಚನ ಮತ್ತು ವಾರ್ದಾ ಗಾಂಧೀ ಧಾಮದಲ್ಲಿ ಭೇಟಿಯಾದರು. ೧೯೭೧ರಲ್ಲಿ ಸರ್ವೋದಯ ಕಾರ್ಯ ನಿಮಿತ್ತ ಬೆಂಗಳೂರು ಗಾಂಧೀ ಆಶ್ರಮ ಸೇರಿದಾಗ ರಮೇಶ್ ಇವರ ಜತೆಗೂಡಿದರು. ಹೀಗೆ ಒಟ್ಟಾದ ಈ ನಾಲ್ವರು ೧೯೮೦ರಲ್ಲಿ ಮುಂಡಗೋಡು ಸಮೀಪದ ಕೊಸೂರು ಗ್ರಾಮದಲ್ಲಿ ಸರ್ವೋದಯ ಕಾರ್ಯಕರ್ತರಿಂದ ಜಮೀನು ಪಡೆದು ಜೀವನ ಆರಂಭಿಸಿದರು. ಕೆಲವು ಕಾರಣಗಳಿಂದ ಅಲ್ಲಿ ನೆಲೆ ನಿಲ್ಲಲಾಗಲಿಲ್ಲ.

ಈ ಮಧ್ಯೆ ವಾರ್ಧಾದ ಸರ್ವೋದಯ ಚಳವಳಿಯಲ್ಲಿ ಈ ನಾಲ್ವರಿಗೆ ಮುಧೋಳದ ಸರ್ವೋದಯ ಕಾರ್ಯಕರ್ತ ಶಂಕರ್ ಉತ್ತೂರು ಅವರ ಪರಿಚಯವಾಗಿತ್ತು. ಸುಮಾರು ೨೦ ವರ್ಷಗಳ ಕಾಲ ವಿನೋಬಾ ಭಾವೆಯವರ ಸಂಪರ್ಕದಲ್ಲಿ ಬೆಳೆದಿದ್ದ ಶಂಕರ್, ಈ ನಾಲ್ವರಿಗೆ ಮುಧೋಳ ಸಮೀಪದ ಎರಡೂವರೆ ಎಕರೆ ಜಮೀನು ಖರೀದಿಸಿ, ಮನೆ ನಿರ್ಮಿಸಿ ಕೊಟ್ಟರು. ಹೀಗೆ ೧೯೮೩ರಲ್ಲಿ ಸ್ವಾವಲಂಬಿ ಜೀವನದ 'ವಾತ್ಸಲ್ಯ ಧಾಮ' ಪ್ರಾರಂಭವಾಯಿತು.

'ದೇವರನ್ನು ಎಲ್ಲಡೆ ಕಾಣಬೇಕು. ನಿತ್ಯ ಜೀವನಕ್ಕೆ ಆಹಾರ, ವಸತಿ ಬೇಕು. ಇದಕ್ಕಾಗಿ ಭೂತಾಯಿ ಸೇವೆಯೊಂದೇ ದಾರಿ. ಆ ತಾಯಿ ಸೇವೆಯೇ ದೇವರ ಸೇವೆ. ಆಕೆ ನಮ್ಮ ಮತ್ತು ಗೋವುಗಳ ಹೊಟ್ಟೆ ತುಂಬಿಸುತ್ತಾಳೆ. ಇದಕ್ಕಿಂತ ಇನ್ನೇನು ಬೇಕು?' ಎನ್ನುತ್ತಾರೆ ಸೇವಾನಂದಜೀ.

ಪ್ರತಿನಿತ್ಯ ಬೆಳಗಿನ ಜಾವ ೩.೩೦ಕ್ಕೆ 'ವಾತ್ಸಲ್ಯ ಧಾಮ'ದಲ್ಲಿ ಎರಡು ಸೋಲಾರ್ ದೀಪಗಳು ಮಿಣುಕುತ್ತವೆ. ನಾರಾಯಣ ಭಾಯಿ, ರಮೇಶ್ ಭಯ್ಯಾ ಕೆಲಸ ಆರಂಭಿಸುತ್ತಾರೆ. ಮಧ್ಯೆ ಪ್ರಾಣಾಯಾಮ ತಪ್ಪದು. ಆಕಳು ಕೊಟ್ಟಿಗೆ ಸ್ವಚ್ಛ ಮಾಡುತ್ತಾರೆ. ರಮೇಶ್ ಹಾಲು ಹಿಂಡಿ ಕ್ಯಾನ್‌ಗೆ ತುಂಬಿ ಸಾಲಾಗಿ ಜೋಡಿಸುತ್ತಾರೆ. ನಾರಾಯಣ ಭಾಯಿ ಅಡುಗೆ ಮನೆಯಲ್ಲಿ ಮೀರಾಜಿಗೆ ಸಹಾಯ ಮಾಡುತ್ತಾರೆ. ನಂತರ ಅವರು ಮನೆ ಸ್ವಚ್ಛಗೊಳಿಸಿ, ಗೋವುಗಳಿಗೆ ಹಿಂಡಿ, ಬೂಸಾ ತಯಾರಿಸುತ್ತಾರೆ. ಬೆಳಗಿನ ಪ್ರಾರ್ಥನಾ ಸಮಯಕ್ಕೆ (೬.೧೫) ಸರಿಯಾಗಿ ಗಂಟೆ ಮೊಳಗುತ್ತದೆ. ಭಯ್ಯಾ, ಭಾಯಿ ತೆಂಗಿನ ಮಟ್ಟೆ ಹಿಡಿದು ಆಕಳು ಮೈದಡುವುತ್ತಾ ಸಂಸ್ಕೃತದಲ್ಲಿ ಪ್ರಾರ್ಥನೆ ಆರಂಭಿಸುತ್ತಾರೆ. ಇಲ್ಲಿ ಪ್ರಾರ್ಥನೆಗೆ ಪ್ರತ್ಯೇಕ ಕೊಠಡಿಯಿಲ್ಲ, ಒಂದೆಡೆ ಕುಳಿತುಕೊಳ್ಳಬೇಕೆಂಬ ನಿಯಮವಿಲ್ಲ. ಕರ್ತವ್ಯವೇ ಪ್ರಾರ್ಥನೆ. ಹಾಗಾಗಿ ಕಡಿಮೆ ಸಮಯದಲ್ಲಿ ಹೆಚ್ಚಿನ ಕೆಲಸ ಮುಗಿಯುತ್ತದೆ! ಇತ್ತ

ಪ್ರಾರ್ಥನೆ ಮಾಡುತ್ತಲೇ ಮೀರಾಜಿ ಬೆಳಗಿನ ಆಹಾರ ಸಿದ್ಧಪಡಿಸುತ್ತಾರೆ. ೬.೪೫ಕ್ಕೆ ಬೆಳಗಿನ ಉಪಹಾರ ಸೇವನೆ.

ಆಹಾರ ತಯಾರಿಕೆಗೆ ಬೇಕಾಗುವ ಎಲ್ಲ ವಸ್ತುಗಳನ್ನೂ ಆಶ್ರಮದಲ್ಲೇ ಬೆಳೆಯಲಾಗುತ್ತದೆ. ಎಣ್ಣೆ, ಬೆಂಕಿಪೊಟ್ಟಣ, ಉಪ್ಪು ಮಾತ್ರ ಹೊರಗಿನಿಂದ ಕೊಳ್ಳುತ್ತಾರೆ. ತಾವು ನಿತ್ಯ ಬಳಸುವ ಆಹಾರದ ಲೆಕ್ಕ ಬರೆದಿಡುತ್ತಾರೆ. ನಿತ್ಯದ ತಿಂಡಿ, ಊಟಕ್ಕೆ ಎಷ್ಟು ಮಂದಿ ಇದ್ದಾರೆ, ಎಷ್ಟು ಅಕ್ಕಿ, ಬೇಳೆ, ತರಕಾರಿ ಬಳಸುತ್ತೇವೆ ಎಂಬ ವಿಚಾರಗಳನ್ನೂ ಪಾಟಿಯಲ್ಲಿ ಬರೆದು ತೂಗು ಹಾಕುತ್ತಾರೆ. ಊಟಕ್ಕೆ ಬಳಸುವ ಪದಾರ್ಥಗಳನ್ನೂ ತೂಕ ಮಾಡಲಾಗುತ್ತದೆ. ಯಾವುದೂ ಮಿತಿ ಮೀರುವಂತಿಲ್ಲ. ದಿನಕ್ಕೆ ಒಂದು ರಡ್ಡಿ ಉಪಯೋಗಿಸಿ, ಉರಿದು ಉಳಿದದ್ದನ್ನು ಮರು ಬಳಕೆ ಮಾಡುತ್ತಾರೆ! ಒಂದು ಸಾರಿ ಬೆಂಕಿ ಹೊತ್ತಿಸಿದರೆ, ಅದನ್ನು ವರ್ಗಾಯಿಸಲು ಕಾಗದದ ಚೂರುಗಳನ್ನು ಬಳಸುತ್ತಾರೆ. ಉಪಾಹಾರದ ನಂತರ ಎಲ್ಲರೂ ಕೃಷಿ ಕೆಲಸಕ್ಕೆ ತೆರಳುತ್ತಾರೆ.

ಹಸಿ ಆಹಾರ, ಹಣ್ಣು-ಹಂಪಲುಗಳು ಇವರ ಮುಖ್ಯ ಆಹಾರ. ಜವೆ ಗೋಧಿ ಉಪ್ಪಿಟ್ಟು ಇವರ ನಿತ್ಯದ ಆಹಾರ. ನಿಯಮಿತ ಉಪ್ಪು, ಖಾರ ಸೇವನೆ, ದೇಹದ ಉಷ್ಣತೆ ಹೆಚ್ಚಾದರೆ ಸಪ್ಪೆ ಮಜ್ಜಿಗೆ, ಪಾನಕ, ಶೀತ ಹೆಚ್ಚಾದರೆ ಕೈ ಮದ್ದು, ಶುಂಠಿ ಕಷಾಯ. ಇಷ್ಟೇ ಇವರ ಆಹಾರ ಮತ್ತು ಉಪಭೋಗಗಳು.

ಉಡುವ ಬಟ್ಟೆಗಳಲ್ಲೂ ಸ್ವಾವಲಂಬಿತನ. ಮೀರಾ ಅಕ್ಕ ವರ್ಷಕ್ಕೆ ಎರಡೇ ಸೀರೆಯನ್ನು ಸ್ವತಃ 'ಕಿಸಾನ್ ಚರಕ'ದಿಂದೇ ನೇಯ್ದುಕೊಳ್ಳುತ್ತಾರೆ. ಉಳಿದವರು ಖಾದಿ ಬಟ್ಟೆಯನ್ನೇ ನೇಯ್ದು ಧರಿಸುತ್ತಾರೆ. ಉಡುವ ತುಂಡು ಬಟ್ಟೆಗೆ ಹೆಚ್ಚಿನ ಹಣ ಏಕೆ ಕೊಡಬೇಕು ಎಂಬುದು ಇವರ ಪ್ರಶ್ನೆ. ಆದರೂ ಆಶ್ರಮಕ್ಕೆ ದಾನವಾಗಿ ಬರುವ ಖಾದಿ ಬಟ್ಟೆಗಳನ್ನು 'ಇಲ್ಲ'ದವರಿಗೆ ಕೊಡುತ್ತೇವೆ ಎನ್ನುತ್ತಾರೆ ಮೀರಾಜಿ.

ಆಶ್ರಮದ ಪ್ರಾರಂಭದ ದಿನಗಳಲ್ಲಿ ಎಲ್ಲರೂ ಕೃಷಿಮಾಡಿ ವರ್ಷಕ್ಕಾಗುವಷ್ಟು ದವಸ-ಧಾನ್ಯ ಬೆಳೆಯುತ್ತಿದ್ದರು. ಆಗ ಈ ಆಶ್ರಮದಲ್ಲಿದ್ದ ೧೮ ಸರ್ವೋದಯ ಕಾರ್ಯಕರ್ತರು ಕೃಷಿಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಅಷ್ಟು ಉತ್ಪಾದನೆ ಅವಶ್ಯವೂ ಆಗಿತ್ತು. ಈಗ ಇರುವ ನಾಲ್ಕು ಜನರಲ್ಲಿ ರಮೇಶ್ ಒಬ್ಬರನ್ನು ಹೊರತುಪಡಿಸಿದರೆ ಉಳಿದವರಿಗೆ ಅಷ್ಟು ಕೆಲಸ ಮಾಡುವ ಶಕ್ತಿ ಇಲ್ಲ. ಆದ್ದರಿಂದ ಜಮೀನಿನ ಕೆಲವು ಭಾಗವನ್ನು ಗುತ್ತಿಗೆಗೆ ನೀಡಲಾಗಿದೆ. ತಮಗೆ ಉಳುಮೆ ಮಾಡಲು ಸಾಧ್ಯವಾಗುವಷ್ಟು ಭೂಮಿಯಲ್ಲಿ ಮಾತ್ರ ಇವರು ಕೃಷಿ ಮಾಡುತ್ತಿದ್ದಾರೆ.

ಇಲ್ಲಿ ಉಳುಮೆಗೆ ಪ್ರಾಣಿಗಳ ಬಳಕೆ ಇಲ್ಲ. ಜಮೀನು ಗುತ್ತಿಗೆ ಪಡೆದವರು ಮಾತ್ರ ಪ್ರಾಣಿಗಳನ್ನು ಬಳಸುತ್ತಾರೆ. ಉಳಿದಂತೆ ಆಶ್ರಮದ ಕೃಷಿಕರು ತಮಗೆ ಬೇಕಾದ ಕೃಷಿ ಉಪಕರಣ ತಯಾರಿಸಿಕೊಂಡು, ವ್ಯವಸಾಯ ಮಾಡುತ್ತಾರೆ. ಜಮೀನನ್ನು ಸಂಪೂರ್ಣ ಸಾವಯವ ಕೃಷಿಗೆ ಅಳವಡಿಸಿರುವುದರಿಂದ ಭೂಮಿ ಮೃದುವಾಗಿದ್ದು, ಫಲವತ್ತತೆಯಿಂದ ಕೂಡಿದೆ. ಹಾಗೇ ಗುತ್ತಿಗೆ ಕೊಟ್ಟವರಿಗೂ ಸಾವಯವ ಕೃಷಿಯನ್ನೇ ಕೈಗೊಳ್ಳಲು ಷರತ್ತು ವಿಧಿಸಿದ್ದಾರೆ.

ಈ ಆಶ್ರಮ, ಕೃಷಿ ಕಾರ್ಯಕ್ಕಾಗಿ ಇದುವರೆಗೆ ಸರಕಾರದ ಸಹಾಯ ಕೇಳಿಲ್ಲ. ಬ್ಯಾಂಕ್‌ಗಳಿಂದ ಸಬ್ಸಿಡಿ ಬಯಸಿಲ್ಲ. ವಯಸ್ಸಾಗಿದೆ ಎಂದು ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿಗೂ ಇವರು ಅರ್ಜಿಹಾಕಿಲ್ಲ! ಅಷ್ಟೇ ಅಲ್ಲ, ಡ್ರಿಪ್ ಹಾಕಲು ಬಂದವನಿಗೆ ಸಬ್ಸಿಡಿ ಬೇಡ ಎಂದು ವಾಪಸ್ಸು ಕಳುಹಿಸಿದ್ದಾರೆ!

ಹೀಗೆ ಕೃಷಿ ಬದುಕನ್ನು ಸವೆಸುತ್ತಾ ಸ್ವಾವಲಂಬಿಗಳಾಗಿರುವ ಈ ಕೃಷಿ ಋಷಿಗಳು ದಿನಕ್ಕೆ ಕನಿಷ್ಠವೆಂದರೂ ೧೨ ಗಂಟೆಗಳ ಕಾಲ ಮಣ್ಣಿನಲ್ಲಿ ಬೆವರಿಳಿಸುತ್ತಾರೆ. ಸ್ವಾಮೀಜಿ ಮತ್ತು ಮೀರಾಜಿ ಅವರು ಹೊರಗಿನ ಕೃಷಿ ಕೇ ಸದಲ್ಲಿ ತೊಡಗುವುದಿಲ್ಲವಾದ್ದರಿಂದ ನೆರಳಲ್ಲೇ ಕುಳಿತು ದುಡಿಯುತ್ತಾರೆ.

ವಾತ್ಸಲ್ಯ ಧಾಮಕ್ಕೆ ನಿತ್ಯವೂ ಅತಿಥಿಗಳಿರುತ್ತಾರೆ. ಅವರೂ ಆಶ್ರಮದಲ್ಲಿನ ಕೃಷಿಕಾರ್ಯಗಳಲ್ಲಿ ಭಾಗಿಯಾಗಿ ಸೇವೆ ಸಲ್ಲಿಸುವ 'ಸೇವಾಕರ್ತರು'. ಒಬ್ಬರು ಹಸುಗಳನ್ನು ಮೇಯಿಸಿಕೊಂಡು ಬಂದರೆ, ಕೆಲವರು ಕೊಟ್ಟಿಗೆ ಸ್ವಚ್ಛ ಮಾಡುತ್ತಾರೆ. ಇನ್ನಾರೊ ಕಾಂಪೋಸ್ಟ್ ತಯಾರಿಸಿದರೆ, ಮತ್ತೊಬ್ಬರು ಮೇವು ಒಟ್ಟು ಮಾಡುತ್ತಾರೆ. ಹೀಗೆ ತಮಗೆ ತಿಳಿದ ಕಾರ್ಯಗಳಲ್ಲಿ ಅತಿಥಿಗಳು ಸಹಿಕರಿಸುತ್ತಾರೆ. ಅತಿಥಿಗಳನ್ನು ಹಾಗೇ ಕಳುಹಿಸುವ ಪರಿಪಾಠ ಇಲ್ಲಿಲ್ಲ. ಆಶ್ರಮದಲ್ಲೇ ಬೆಳೆಯುವ ಹಣ್ಣು, ಹಂಪಲುಗಳನ್ನ ನೀಡಿ ಅತಿಥಿ–ಅಭ್ಯಾಗತರನ್ನು ಗೌರವಿಸುತ್ತಾರೆ. ಇದು ನಿತ್ಯ 'ಸೇವಾಲಯ' ಎನ್ನುತ್ತಾರೆ ಸಮೀಪದ ಉತ್ತೂರು ನವೋದಯ ಶಾಲೆಯ ಮುದ್ದಣ ಮಾಸ್ತರು. ಪ್ರಾರ್ಥನೆ, ರಾಮ ಭಜನೆ ನಡೆಯುವ ಈ ಗಾಂಧೀವಾದಿಗಳ ಆಶ್ರಮದಲ್ಲಿ ದೇವರಿಗೊಂದು ಮಂದಿರವಿಲ್ಲ. ಕೃಷ್ಣನ ವಿಗ್ರಹಕ್ಕೆ ಕೈ ಮುಗಿಯುವುದು ಬಿಟ್ಟರೆ, ಉಳಿದಂತೆ ಯಾವುದೇ ದೇವತಾ ಕಾರ್ಯ ನಡೆಯುವುದಿಲ್ಲ.

ಸೂರ್ಯ ಮೋಡದ ಮರೆಗೆ ಸರಿಯುತ್ತಿದ್ದಂತೆ ಅಕ್ಕ ಪಕ್ಕದ ಗ್ರಾಮಸ್ಥರು ಆಶ್ರಮಕ್ಕೆ ಬರುತ್ತಾರೆ. ಸೇವಾನಂದಜೀ ಅವರಿಂದ ಭಗವದ್ಗೀತೆ, ಗಾಂಧೀ ವಿಚಾರಧಾರೆ, ಆಧ್ಯಾತ್ಮ ಚಿಂತನೆ ಕೇಳುತ್ತಾರೆ. ಹೀಗೆ ಆಶ್ರಮಕ್ಕೆ ಬರುವ ಎಲ್ಲರಿಗೂ ಸ್ವಾಮೀಜಿ 'ನಮಸ್ಕಾರ'ದ ಸಂಸ್ಕಾರ ಕಲಿಸಿದ್ದಾರೆ. ಅಷ್ಟೇ ಅಲ್ಲ, ಸ್ವಾವಲಂಬನೆಯ ಪಾಠ ಬೋಧಿಸಿದ್ದಾರೆ. ರಾತ್ರಿ ನಾಳಿನ ಕೆಲಸಕ್ಕೆ ಬೇಕಾದ ಪರಿಕರ ಸಿದ್ಧಪಡಿಸುವ ಚರ್ಚೆ ನಡೆಯುತ್ತದೆ. ಇಂಥ ಸ್ವಚ್ಛ, ಸ್ವಾವಲಂಬೀ ಬದುಕು ಸಾಗಿಸುತ್ತಿರುವ ಈ ಗಾಂಧೀವಾದಿಗಳು ಒಂದು ಬೇಡಿಕೆಯನ್ನು ಮಾತ್ರ ಅತಿಥಿಗಳ ಮುಂದಿಡುತ್ತಾರೆ. ಅದೇನೆಂದರೆ, 'ಗಾಂಧೀ ತತ್ವ'ದಲ್ಲಿ ನಂಬಿಕೆಯಿಟ್ಟು, ಸ್ವಯಂ ಪ್ರೇರಿತರಾಗಿ ಆಶ್ರಮದಲ್ಲಿ ಕೆಲಸ ಮಾಡುವ ಯುವಕರು ಬೇಕು. ಹೌದು, ಈಗ ಇರುವ ಎಲ್ಲರೂ ಕೃಷರಾದರೆ ಆಶ್ರಮದ ಕೃಷಿ ಸೊರಗುತ್ತದಲ್ಲಾ ಎಂಬ ಬೇಸರ ಇವರಲ್ಲಿದೆ.

ಒಟ್ಟಾರೆ ಈ ಆಶ್ರಮ ಗಾಂಧೀ, ವಿನೋಬಾ ಅವರ ತತ್ವಗಳನ್ನು ಜೀವಂತವಾಗಿಟ್ಟಿದೆ. ಗಾಂಧೀ ಹುತಾತ್ಮರಾಗಿ ೬೦ ವರ್ಷಗಳು ಕಳೆದಿದ್ದರೂ ಇಂಥ ಸಾಧಕರ ಮೂಲಕ ಅವರ ತತ್ವಗಳು ಕರ್ನಾಟಕದಲ್ಲಿ ಹಸಿರಾಗಿಯೇ ಇವೆ!

(ಸಾಭಾರ : ವಿಜಯ ಕರ್ನಾಟಕ)

ಟ್ರಸ್ಟ್ ಸಮಾಚಾರ

ನಿಯರು ಟ್ರಸ್ಟಿಗೆ ಭೇಟಿ ಕೊಟ್ಟು ಟ್ರಸ್ಟಿನ ಕಾರ್ಯ
ಸಂತೋಷ ಮತ್ತು ಬೆಂಬಲವನ್ನು ಸೂಚಿಸಿದರು.
ಸೂರಿನ ಸಹಾಯಕ ಅಧಿಕಾರಿಯವರಾದ
ಯ ವ್ಯವಸ್ಥಾಪಕರಾದ ನಾಗರಾಜ್, ಕರ್ನಾಟಕ
ಶ್ರೀ ಟಿ.ತಿಮ್ಮೇಗೌಡರು.


ಮೇಲುಕೋಟೆಯಲ್ಲಿಯ ಹಿರಿಯ ನಾಗರಿಕರ
ಸಮಾವೇಶದಲ್ಲಿ ಸುಮಾರು ೧೨೦ ಹಿರಿಯರು
ಹಿರಿಯ ನಾಗರಿಕರಿಗೆ ಮತ್ತು ಇತರ ಸಾರ್ವಜನಿಕ
ಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು.
ಶ್ರೀ ಕೃಷ್ಣ ಶಿಶುವಿಹಾರ ಮಕ್ಕಳ ಸಾಂಸ್ಕೃತಿಕ
. ಈ ಕಾರ್ಯಕ್ರಮದಲ್ಲಿ ಮಕ್ಕಳ ಪಾಲಕರು
ನಡೆಯುತ್ತಿರುವ ಅಖಿಲ ಭಾರತ ಖಾದಿ
ಡಿಸಲಾಗಿದ್ದ ಮಂಡ್ಯ ಜಿಲ್ಲಾ ದಿನೋತ್ಸವದ
ಂಡ್ಯ ಜಿಲ್ಲೆಯ ಪರವಾಗಿ ಮುಖ್ಯ ಅತಿಥಿಗಳಾಗಿ
ಮಲ್ಲಪ್ಪ ವಿದ್ಯಾಸಂಸ್ಥೆಯ ಗಣರಾಜ್ಯೋತ್ಸವ
ಯಾಗಿ ಭಾಗವಹಿಸಿದರು.

ಗ್ಗ, ಶ್ರೀ ಪಿ.ಎಸ್.ರಂಗನಾಥನ್ ಮೈಸೂರು,
.ಎಚ್.ಜಿ. ಬೆಂಗಳೂರು, ಶ್ರೀ ಎಂ.ಕೆ.ಶಿವಸ್ವಾಮಿ
ಳೂರು, ಶ್ರೀ ಎಸ್.ನಾಗಭೂಷಣ್ ಬೆಂಗಳೂರು
ರ್ಯಕ್ರಮಗಳಿಗಾಗಿ ಧನಸಹಾಯ ಮಾಡಿದರು.

ನ ಮೇಲುಕೋಟೆಯಲ್ಲಿ ಟ್ರಸ್ಟಿನ ಆಶ್ರಯದಲ್ಲಿ
ಎಂಬ ಕಾರ್ಯಕ್ರಮವನ್ನು ನಡೆಸಿಕೊಂಡು
ವಾರು ಮನೆಗಳಲ್ಲಿ ಮಣ್ಣಿನಿಂದ ತಯಾರಿಸಲ್ಪಟ್ಟ
ಈ ಪಾತ್ರೆಯಲ್ಲಿ ಆಯಾ ಮನೆಯಲ್ಲಿಯ ಮಗು
ಲು ತನ್ನ ಮುಷ್ಟಿಯಷ್ಟು ಧಾನ್ಯವನ್ನು ಹಾಕುವುದು.
ತಿಂಗಳ ಕೊನೆಯಲ್ಲಿ ಸಂಗ್ರಹಿಸಿ ದುರ್ಬಲರು
ಎರಡು ತಿಂಗಳಿಗೊಮ್ಮೆ ಸರ್ವೋದಯ ಪಾತ್ರಾ
ದಯ ವಿಚಾರಗಳ ವಿಷಯವನ್ನು ಸಂಗ್ರಹಿಸಿ
ೋದಯ ಪಾತ್ರೆಯನ್ನಿಟ್ಟಿರುವವರಿಗೆಲ್ಲ ಉಚಿತವಾಗಿ
ೀಲನ ಬೆಳೆಯುತ್ತಿದೆ.

ಜನಪದ ನಿಲಯದ ಅಂತರಂಗದಲ್ಲಿ . . . ೫೧

- ಸುರೇಂದ್ರ ಕೌಲಗಿ



ಟ್ರಸ್ಟಿನ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಕಾಣಬರುವ ಪ್ರಮುಖ ವ್ಯಕ್ತಿಗಳಲ್ಲಿ ಕನ್ನಡ ಜನಪ್ರಿಯ ವಾರಪತ್ರಿಕೆಯಲ್ಲಿ ಸಂಪಾದಕ ಮಂಡಳಿಯ ಸದಸ್ಯರಾಗಿದ್ದ ಹೆಚ್.ಎನ್. ಆನಂದ್‌ರವರು. ಇವರು ಟ್ರಸ್ಟಿನ ದೈನಂದಿನ ಕಾರ್ಯಕ್ರಮಗಳಲ್ಲಿ ನೇರವಾಗಿ ಭಾಗವಹಿಸದೆ ಇದ್ದರೂ ಪರೋಕ್ಷವಾಗಿ ಸಹಾಯ ಮಾಡಿದವರು. ಆನಂದ್ ಅವರ ಸಹಾಯ ಪರೋಕ್ಷವಾಗಿದ್ದರೂ ಅದು ಟ್ರಸ್ಟಿನ ಬೆಳವಣಿಗೆಗೆ ಸಧೃಢತೆಯನ್ನು ತಂದು ಕೊಡಲು ಸಹಾಯಕವಾಯಿತು. ಟ್ರಸ್ಟ್ ಪ್ರಾರಂಭದಿಂದಲೂ ಸ್ವಂತ ಪರಿಶ್ರಮ ಮತ್ತು ಕ್ಷಮತೆ ಹಾಗೂ ಸಮಾಜದ ಸಹಾಯದಿಂದಲೇ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಯಾರು ಸ್ವಪರಿಶ್ರಮ ಮಾಡುತ್ತಾರೋ ಅವರಿಗೆ ದೇವರು ಸಹಾಯ ಮಾಡುತ್ತಾನೆಂಬ ಇಂಗ್ಲಿಷ್ ಭಾಷೆಯ ಗಾದೆಮಾತಿನ ಅನುಭವ ಟ್ರಸ್ಟ್ ನಡೆಸುವಾಗ ಸುಸ್ಪಷ್ಟವಾಗಿದೆ. ಹೀಗೆ ಟ್ರಸ್ಟ್ ತನ್ನ ಸ್ವಪರಿಶ್ವಮವನ್ನವಲಂಬಿಸಿ ಕೆಲಸ ಮಾಡಿಕೊಂಡು ಬರುತ್ತಿದ್ದಾಗ ಟ್ರಸ್ಟಿನ ಜೀವನದಲ್ಲಿ ಆನಂದರವರ ಪ್ರವೇಶ ಬಹು ಅನಿರೀಕ್ಷಿತವಾಗಿ ಆಯಿತು. ವಿಶ್ವ ಅಂಗವಿಕಲರ ದಿನಾಚರಣೆಯ ನಿಮಿತ್ತವಾಗಿ ಸುಧಾ ವಾರಪತ್ರಿಕೆ ಅಂಗವಿಕಲರಿಗೆ ಸಂಬಂಧಿಸಿದಂಥ ಲೇಖನಗಳನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಿತು. ಮುಖಪುಟದ ಮೇಲೆ ಓರ್ವ ಅಂಗವಿಕಲ ಬಾಲಕನ ಚಿತ್ರವನ್ನು ಪ್ರಕಟಿಸಬೇಕೆಂದು ಯೋಚಿಸಿತು. ಟ್ರಸ್ಟ್ ಆಗಲೆ ಕರುಣಾಗೃಹವೆಂಬ ಹೆಸರಿನಲ್ಲಿ ಗ್ರಾಮಾಂತರ ಪ್ರದೇಶದ ಅಂಗವಿಕಲ ಮಕ್ಕಳಿಗಾಗಿ ವಸತಿಗೃಹವೊಂದನ್ನು ಪ್ರಾರಂಭಿಸಿತ್ತು. ಆಗ ಸುಮಾರು ೩೦ ಅಂಗವಿಕಲ ಮಕ್ಕಳು ಕರುಣಾಗೃಹದಲ್ಲಿದ್ದರು. ಅವರೆಲ್ಲರು ಕರ್ನಾಟಕದ ಬೇರೆ ಬೇರೆ ಗ್ರಾಮಗಳಿಂದ ಬಂದಂಥವರಾಗಿದ್ದರು. ಆ ಸಮಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಂಗವಿಕಲರಿಗಾಗಿ ಕೆಲಸ ಮಾಡುವ ಅಪರೂಪದ ಸಂಸ್ಥೆಗಳಲ್ಲಿ ಕರುಣಾಗೃಹ ಒಂದಾಗಿತ್ತು. ಆದ್ದರಿಂದ ಅಂಗವಿಕಲರ ಬಗ್ಗೆ ವಿಶೇಷ ಸಂಚಿಕೆಯನ್ನು ಪ್ರಕಟಿಸಬೇಕೆಂದು ಸುಧಾ ಬಳಗವು ಆಲೋಚಿಸಿದಾಗ ಆನಂದ ಮತ್ತು ಅವರ ಸ್ನೇಹಿತರ ಶೋಧನಾ ದೃಷ್ಟಿ ಮೇಲುಕೋಟೆಯ ಕರುಣಾಗೃಹದ ಮೇಲೆ ಬಿತ್ತು. ಒಂದು ದಿನ ಅವರು ಅಕಸ್ಮಾತ್ತಾಗಿ ಮೇಲುಕೋಟೆಗೆ ಬಂದು ಜನಪದ ಸೇವಾ ಟ್ರಸ್ಟ್ ಮತ್ತು ಕರುಣಾಗೃಹದ ಬಗ್ಗೆ ತಮಗೆ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಿಕೊಂಡರು. ಕರುಣಾಗೃಹದಲ್ಲಿಯ ಮಕ್ಕಳ ಹಲವಾರು ಚಿತ್ರಗಳನ್ನು ತೆಗೆದುಕೊಂಡರು. ಆ ಚಿತ್ರಗಳೆಲ್ಲವು ಅಂಗವಿಕಲ ಮಕ್ಕಳು ಮಾಡುತ್ತಿದ್ದ ಕ್ರಿಯಾ ಚಟುವಟಿಕೆಗಳಿಗೆ ಸಂಬಂಧಿಸಿದವುಗಳಾಗಿದ್ದವು. ಅಂಥ ಚಿತ್ರಗಳಲ್ಲಿ ಒಂದು ಚಿತ್ರ ಆಗುಂಬೆಯ ಸುರೇಶನದಾಗಿತ್ತು. ಈತನಿಗೆ ಎರಡು

ಹಸ್ತಗಳಿರಲಿಲ್ಲ. ಆದರೂ ಕೂಡ ಆರೋಗ್ಯವಂತನಾಗಿ, ಬುದ್ಧಿವಂತನಾಗಿ ತುಂಬಾ ಚಟುವಟಿಕೆಯುಳ್ಳವನಾಗಿದ್ದ. ಕಾಲಿನ ಬೆರಳುಗಳ ನಡುವೆ ಲೇಖನಿಯನ್ನು ಹಿಡಿದು ಬರೆಯುತ್ತಿದ್ದ. ಚಿತ್ರಗಳನ್ನೂ ರಚಿಸುತ್ತಿದ್ದ. ಸುರೇಶನ ಈ ವ್ಯಕ್ತಿತ್ವ ಆನಂದರವರಿಗೆ ತುಂಬಾ ಮೆಚ್ಚುಗೆಯಾಗಿ ಅವನ ಜೀವನದ ಬಗ್ಗೆ ಪ್ರತ್ಯೇಕ ಮಾಹಿತಿ ಸಂಗ್ರಹಿಸುವುದರ ಜೊತೆಗೆ ಅವನು ಕಾಲಿನಿಂದ ಬರೆಯುತ್ತಿದ್ದ ಚಿತ್ರವನ್ನು ಸಹ ತೆಗೆದುಕೊಂಡರು. ಮುಂದೆ ಸುಧಾ ಪತ್ರಿಕೆಯ ಮುಖಪುಟದ ಮೇಲೆ ಸುರೇಶನ ಸುಂದರವಾದ ಮತ್ತು ಮನಸನ್ನು ಕಲಕುವ ಚಿತ್ರವನ್ನು ಪ್ರಕಟಿಸಿದರು. ಒಂದು ಪರಿಚಯಾತ್ಮಕ ಲೇಖನದ ಕೊನೆಯಲ್ಲಿ ಕರುಣಾಗೃಹದ ಧ್ಯೇಯೋದ್ದೇಶದ ಸಾಧನೆಗಾಗಿ ಜನಪದ ಸೇವಾ ಟ್ರಸ್ಟಿಗೆ ಆಸಕ್ತರು ಧನಸಹಾಯ ಮಾಡಬಹುದೆಂದು ಬರೆದಿದ್ದರು. ಅಲ್ಲದೆ ದಾನ ಕೊಡುವಂಥವರ ಹೆಸರನ್ನು ಪತ್ರಿಕೆಯಲ್ಲಿ ಕ್ರಮಶಃ ಪ್ರಕಟಿಸುವುದಾಗಿಯೂ ತಿಳಿಸಿದ್ದರು. ಸುಧಾ ವಾರಪತ್ರಿಕೆ ತುಂಬಾ ಜನಪ್ರಿಯ ಪತ್ರಿಕೆಯಾದ್ದರಿಂದ ಕಳೆದ ಹಲವಾರು ವರ್ಷಗಳಿಂದ ಎಲೆಯ ಮರೆಯ ಕಾಯಿಯಂತೆ ಯಾವ ಪ್ರಚಾರ ಮತ್ತು ಆಡಂಬರವಿಲ್ಲದೆ ಕೆಲಸ ಮಾಡುತ್ತಿದ್ದ ಕರುಣಾಗೃಹ ಮತ್ತು ಜನಪದ ಸೇವಾ ಟ್ರಸ್ಟ್ ಧಿಡೀರನೆ ಪ್ರಚಾರದ ಪ್ರಕಾಶದಲ್ಲಿ ಕಾಣಿಸಿಕೊಂಡವು. ನಂತರ ಸಮಾಜ ಸೇವೆಯಲ್ಲಿ, ಮುಖ್ಯವಾಗಿ ಅಂಗವಿಕಲರ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಜನರಿಂದ ದಾನ ಬರಲಾರಂಭಿಸಿತು. ಟ್ರಸ್ಟಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತಾ ಹೋಯಿತು. ಜೊತೆಗೆ ಟ್ರಸ್ಟಿನ ಹೆಸರು ಲೋಕೋತ್ತರವಾಯಿತು. ಹೀಗೆ ಶ್ರೀ ಎಚ್.ಎನ್.ಆನಂದ್‌ರವರು ಆ ನೆರವನ್ನು ಯಾವ ಫಲಾಪೇಕ್ಷೆಯಿಲ್ಲದೆ ಮಾಡಿದ್ದುಂಟು. ಆದರೆ ಟ್ರಸ್ಟಿಗೆ ಮಾತ್ರ ಆನಂದ್‌ರವರ ಲೇಖನಿಯ ಶಕ್ತಿ ಆರ್ಥಿಕ ಬಲವನ್ನು, ಆತ್ಮವಿಶ್ವಾಸವನ್ನು ತಂದು ಕೊಟ್ಟಿದ್ದರಲ್ಲಿ ಎರಡು ಮಾತಿಲ್ಲ. ಟ್ರಸ್ಟಿನ ಸುದೀರ್ಘ ಇತಿಹಾಸದಲ್ಲಿ ಟ್ರಸ್ಟಿಗೆ ನೆರವಾದ ಮಹನೀಯರಲ್ಲಿ ಆನಂದ್‌ರವರ ಹೆಸರು ಮಹತ್ವದ ಸ್ಥಾನ ಪಡೆಯುವುದರಲ್ಲಿ ಸಂದೇಹವಿಲ್ಲ. ಜನಪದ ಸೇವಾ ಟ್ರಸ್ಟ್ ಆನಂದ್‌ರವರಿಗೆ ಈ ಸಂಬಂಧವಾಗಿ ಯಾವಾಗಲೂ ಆಭಾರಿಯಾಗಿರುತ್ತದೆ. ಇಂದಿಗೂ ಕೂಡ ಆನಂದ್‌ರವರು ಟ್ರಸ್ಟಿನೊಂದಿಗೆ ಸಂಪರ್ಕವಿರಿಸಿಕೊಂಡಿದ್ದಾರೆ ಮತ್ತು ಆಗಾಗ್ಗೆ ಟ್ರಸ್ಟಿನ ವಿಷಯವಾಗಿ ವಿಚಾರಿಸುತ್ತಿರುತ್ತಾರೆ. ಆದರೆ ಟ್ರಸ್ಟಿನ ದುರ್ದೈವದ ಸಂಗತಿಯೇನೆಂದರೆ ಕರುಣಾಗೃಹಕ್ಕೆ ಯಾರ ಮುಖಪುಟದ ಚಿತ್ರ ಧನಸಹಾಯವನ್ನು ಮತ್ತು ಟ್ರಸ್ಟಿಗೆ ಹೆಸರನ್ನು ತಂದುಕೊಟ್ಟಿತ್ತೋ ಆ ಸುರೇಶ ಮುಂದೆ ಶಿವಮೊಗ್ಗದಲ್ಲಿದ್ದುಕೊಂಡು ಪದವಿಧರನಾಗಿ ತನ್ನ ಗ್ರಾಮದಲ್ಲಿದ್ದಾಗ ಜೀವನದಲ್ಲಿ ನೊಂದು ಆತ್ಮಹತ್ಯೆ ಮಾಡಿಕೊಂಡನು. ಅವನು ಟ್ರಸ್ಟಿನೊಂದಿಗೆ ಸಂಪರ್ಕವಿರಿಸಿಕೊಂಡಿದ್ದರೆ ಈ ದುರಂತ ತಪ್ಪುತ್ತಿತ್ತೇನೋ. ಸುರೇಶ್ ಈಗ ಇಲ್ಲದಿದ್ದರೂ ಅವನ ಸ್ಮರಣೆ ಮಾತ್ರ ಯಾವಾಗಲೂ ಮನಸ್ಸಿನಲ್ಲಿರುತ್ತದೆ. ಮುಂದೆ ಜಪಾನ್ ದೇಶದ ಒಂದು ಪತ್ರಿಕೆಯ ಮುಖಪುಟದ ಮೇಲೂ ಸುರೇಶನ ಚಿತ್ರ ಪ್ರಕಟಗೊಂಡಿತ್ತು.

(ಮುಂದುವರಿಯುವುದು...)

ಬಾಂಧವ್ಯ

(ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ)

೧) ಡಾ.ಎಂ.ದೇವೇಂದ್ರಬಾಬು, ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು.
೨) ಶ್ರೀ ಸಿ.ಎಸ್.ನಾರಾಯಣರಾವ್, ಸ್ವಾತಂತ್ರ್ಯ ಹೋರಾಟಗಾರರು, ಬೆಂಗಳೂರು
೩) ಶ್ರೀಮತಿ ಮೀರಾ ಕೊಪ್ಪೀಕರ್, ವಾತ್ಸಲ್ಯಧಾಮ, ಮುಧೋಳ.
೪) ಶ್ರೀ ಬಿ.ಎಸ್.ಎನ್.ಪ್ರಸಾದ್, ಮೈಸೂರು.
೫) ಶ್ರೀ ಕೆ.ಸುಬ್ಬರಾವ್, ಮೈಸೂರು.
೬) ಶ್ರೀಮತಿ ಎಂ.ಕೆ.ಪ್ರೇಮಲೀಲಾ, ಬೆಂಗಳೂರು.
೭) ಶ್ರೀ ಎಂ.ಕೆ.ಅನಂತಸ್ವಾಮಿ, ಬೆಂಗಳೂರು.
೮) ಶ್ರೀ ಕೆ.ಎಸ್.ಗೋಪಿನಾಥ್, ಬೆಂಗಳೂರು.
೯) ಶ್ರೀ ಎಂ.ಕೆ.ಸುಬ್ಬರಾವ್, ಬೆಂಗಳೂರು.
೧೦) ಶ್ರೀ ಎಂ.ಕೆ.ಶಂಕರ್, ಬೆಂಗಳೂರು.
೧೧) ಶ್ರೀ ಎಂ.ಕೆ.ಶಿವಸ್ವಾಮಿ, ಬೆಂಗಳೂರು.

ಈ ಬಂಧುಗಳು ತಮ್ಮ ಚಂದಾವನ್ನು ನವೀಕರಿಸಿದ್ದಕ್ಕಾಗಿ ಮತ್ತು ಹೊಸದಾಗಿ ಜನಪದ ವಿಚಾರಕ್ಕೆ ಚಂದಾದಾರರಾದ ಕೃಷ್ಣ ಗಂಜಾಂ ಮತ್ತು ಡಾ.ವಿಜಯಕುಮಾರ್, ಮಂಡ್ಯ ಹಾಗೂ ಪ್ರಾಂಶುಪಾಲರು ವಿಜಯ ಪ್ರದ.ಕಾಲೇಜು, ಪಾಂಡವಪುರ ಹಾಗೂ ವಿ.ಆರ್.ಕಟ್ಟಿ ಜಿಯೋಸ್ಯಾಟ್, ಬೆಂಗಳೂರು ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತರದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.
DTP Sanketh, Melkote. Printed at INDIVARA, Nagamangala Phone : 08236 – 298754 e-mail : janapada@yahoo.com